1.10 ಪಿ.ಎಂ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ.

ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸುವಂತೆ ಮಹಾರಾಷ್ಟ್ರ ಶಾಸನ ಸಭೆಯ ನಿರ್ಣಯ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ., ನಾನು ನಿನ್ನೆ ಗಡಿ ಸಮಸ್ಯೆಯ ಬಗ್ಗೆ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆದಿದ್ದೆ. ಆ ಬಗ್ಗೆ ಈ ದಿವಸ ಒಂದು ಹೇಳಿಕೆಯನ್ನು ಸದನದಲ್ಲಿ ನೀಡುವುದಾಗಿ ಸನ್ಮಾನ್ಯ ಸಭಾನಾಯಕರು ನಿನ್ನೆ ಹೇಳಿದ್ದರು. ಮಹಾರಾಷ್ಟ್ರ ಶಾಸನ ಸಭೆಯಲ್ಲಿ ಈ ಗಡಿ ಸಮಸ್ಯೆ ಬಗ್ಗೆ ತೀವ್ರವಾದಂತಹ ಒತ್ತಡವನ್ನು ತಂದು ಬೆಳಗಾವಿಯನ್ನು âà%oiಾರಾಷ್ಟ್ರಕ್ಕೆ ಸೇರಿಸಬೇಕು ಎಂಬ ಒಂದು ನಿರ್ಣಯವನ್ನು ಅಂಗೀಕರಿಸಿದ್ದಾರೆ. ಇದು ಬಹಳ ಅಪಾಯಕಾರಿಯಾದಂತಹ ನಿರ್ಣಯವಾಗಿದೆ. ಇದರಿಂದಾಗಿ ಅವರು ಕರ್ನಾಟಕ ಮತ್ತು ಕನ್ನಡ ನಾಡಿನ ಜನರ ಮೇಲೆ ಬಹಳ ಗಂಬೀರವಾದಂತಹ ಪರಿಸ್ಥಿತಿಯನ್ನು ಒಡ್ಡಿದ್ದಾರೆ. ಶಾಂತವಾಗಿರತಕ್ಕ ಗಡಿಯ ಜನರನ್ನು ಅಶಾಂತಿಯ ವಾತಾವರಣಕ್ಕೆ ತರತಕ್ಕ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಈ ಗಡಿ ಸಮಸ್ಯೆ ಒಂದು ಮುಗಿದ ಅಧ್ಯಾಯವಾಗಿದೆ. ಇದೇ ಸದನದಲ್ಲಿ ಮಹಾಜನ್ ಆಯೋಗದ ವರದಿಯನ್ನು ಯಥಾವತ್ತಾಗಿ ಕೇಂದ್ರ ಸರ್ಕಾರ ಒಪ್ಪಬೇಕೆಂದು ಸರ್ವಾನುಮತದಿಂದ ನಿರ್ಣಯವನ್ನು ಅಂಗೀಕರಿಸಿದ್ದೇವೆ. ಅದರಲ್ಲಿ ಯಾವುದೇ ವಿಧವಾದ ಬದಲಾವಣೆಯನ್ನು ಮಾಡುವಂತಾದ್ದು. ಯಾರಿಗೂ ಸಾಧ್ಯವಿಲ್ಲ. ಈಗ ಉಳಿದಿರುವ ಏಕೈಕ ಮಾರ್ಗವೆಂದರೆ, ಕೇಂದ್ರ ಸರ್ಕಾರದವರು ಕೈಗೊಂಡಿರುವ ನಿರ್ಣಯವನ್ನು ತಿರಸ್ಕರಿಸಿ,

ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆಯಬೇಕು ಹಾಗೂ ಸರ್ವ ಪಕ್ಷಗಳ ನಿಯೋಗವೊಂದನ್ನು ದೆಹಲಿಗೆ ತೆಗೆದುಕೊಂಡು ಹೋಗಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಇದರ ಜೊತೆಗೆ, ಬೆಳಗಾವಿ ತಾಲ್ಲೂಕಿನ 'ತಾಲ್ಲೂಕು ಪಂಚಾಯತಿ ಸಮಿತಿ'ಯವರು ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂಬ ಒಂದು ನಿರ್ಣಯವನ್ನು ಅಂಗೀಕರಿಸಿದ್ದಾರೆ. ಅಷ್ಟೇ ಅಲ್ಲದೇ ಖಾನಾಪುರ ತಾಲ್ಲೂಕು ಪಂಚಾಯತಿ ಸಮಿತ ಹಾಗೂ ನಿಪ್ಪಾಣಿ ತಾಲ್ಲೂಕು ಪಂಚಾಯತಿ ಸಮಿತಿಗಳವರು ಕೂಡ ಈ ರೀತಿಯ ಒಂದು ನಿರ್ಣಯವನ್ನು ಅಂಗೀಕರಿಸಿದ್ದಾರೆ. ಈ ಮೂರು ತಾಲ್ಲೂಕು ಪಂಚಾಯತಿ ಸಮಿತಿಗಳನ್ನು ಸರ್ಕಾರ ಕೂಡಲೇ ರದ್ದು ಪಡಿಸಬೇಕು. ಇದುವರೆವಿಗೂ ರದ್ದು ಪಡಿಸಿದೇ ಇರುವುದು ಸರಿಯಲ್ಲ. ಇದು ಬಹಳ ಅತ್ಯಂತ ಅಪಾಯಕಾರಿಯಾದ ಬೆಳವಣಿಗೆ. ಈ ರೀತಿಯ ಅಪಾಯಕಾರಿಯಾದ ಬೆಳವಣಿಗೆ ಆಗಬಾರದು. ಈ ಬಗ್ಗೆ ನಾವು ನಮ್ಮ ನಿಲುವನ್ನು ಈಗಾಗಲೇ ಸ್ಪಷ್ಟಪಡಿಸಿದ್ದೇವೆ. ಅದನ್ನು ಈಗ ಮತ್ತೆ ಸ್ಪಷ್ಟಪಡಿಸಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಒಂದು ಗಟ್ಟಿಯಾದ ನಿಲುವನ್ನು ತೆಗೆದುಕೊಳ್ಳಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಚ್ಚಿಸುತ್ತೇನೆ. ಈ ರೀತಿ ಆಗದೇ ಹೋದರೆ ಕರ್ನಾಟಕದಲ್ಲಿ ಗಂಭೀರವಾದಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಗೋವಾದ ಬಿ.ಜೆ.ಪಿ. ಮುಖಂಡಾರಾದ ಭಂಡಾರಿ ಎಂಬುವರು ಕೊಂಕಣ ಪ್ರದೇಶವಾದ ಕಾರವಾರವನ್ನು ಗೋವಾಕ್ಕೆ ಸೇರಿಸಬೇಕೆಂದು ಹೇಳಿದ್ದಾರೆ. ಈ ರೀತಿಯ ಅನೇಕ ದಿಕ್ಕೆಟ್ಟ, ಪ್ರಚೋದನಾಕಾರಿಯಾದ ಮಾತುಗಳು ಕೇಳಿ ಬರುತ್ತಿವೆ. ಈ ಸಂದರ್ಭದಲ್ಲಿ ನಾವು ಒಂದು ಸ್ಪಷ್ಟವಾದ ನಿಲುವನ್ನು ತಳೆಯಬೇಕು ಎಂಬ ನನ್ನ ಅತ್ಯಂತ ಕಳಕಳಿಯ ಮನವಿಯನ್ನು ತಮ್ಮ

ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮಾಡಿಕೊಳ್ಳುತ್ತಿದ್ದೇನೆ. ಅವರು ಈ ಬಗ್ಗೆ ಒಂದು ಸ್ಪಷ್ಟವಾದ ಹೇಳಿಕೆಯನ್ನು ಸದನದಲ್ಲಿ ನೀಡಬೇಕು.

ಅಧ್ಯಕ್ಷರು : ಬೆಳಗಾವಿ ಕಡೆಯ ಸಂಬಂಧಪಟ್ಟ ಶಾಸಕರಾದ ಶ್ರೀ ಸುಭಾಷ್ ಜೋಶಿಯವರು ಇಲ್ಲಿದ್ದಾರೆ. ಅವರು ಈಗ ಮಾತನಾಡುತ್ತಾರೆ.

ಶ್ರೀ ಸುಭಾಷ್ ಎಸ್. ಜೋಶಿ : ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ನಿಪ್ಪಾಣಿ ತಾಲ್ಲೂಕು ಪಂಚಾಯತಿ ಸಮಿತಿಯವರೂ ಕೂಡ ಆ ರೀತಿಯ ಒಂದು ನಿರ್ಣಯವನ್ನು ಅಂಗೀಕರಿಸಿದ್ದಾರೆ ಎಂದು ಹೇಳಿದರು. ಆದರೆ ನಿಪ್ಪಾಣಿಯಲ್ಲಿ ತಾಲ್ಲೂಕು ಪಂಚಾಯತಿ ಸಮಿತಿ ಇಲ್ಲ, ಅಲ್ಲಿ ಏನೂ ರೆಸಲ್ಯೂಷನ್ ಆಗಿರುವುದಿಲ್ಲ,

SRI B.I. PATIL : Every time Sri Vatal Nagaraj is bringing this issue. Our people have elected us for this purpose. Our party feels that dispute is pending. Government knows all those things. why he is bringing it again, Sir? Where Belgaum Taluk and Khanapur Taluk people have voted and elected, there the panchayats have got powers. Therefore, they have taken a resolution to merge it to Mahatastra.

(INTERRUPTIONS)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಆ ತಾಲ್ಲೂಕು ಪಂಚಾಯತಿ ಸಮಿತಿಗಳನ್ನು ಕೂಡಲೇ ರದ್ದು ಮಾಡಬೇಕು.

SRI B.I. PATIL : Let the Government take initiative.....

(INTERRUPTIONS)

MR. SPEAKER : It does not fall within their purview.

(INTERRUPTIONS)

MR. SPEAKER : Please resume your seat.

(INTERRRUPTIONS)

SRI B.I. PATIL : Yesterday anti-social elements have gone to our rooms.....

(INTERRUPTIONS)

MR. SPEAKER: You should not attempt to charge. please resume your-seat.

SRI. B.I. PATIL : Our people have elected. I have got right.

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. ತಾಲ್ಲೂಕು ಪಂಚಾಯಿತಿ ಕೆಲಸ ರೆಸಲ್ಯೂಷನ್ ಮಾಡುವುದಿಲ್ಲ,

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಬಾರ್ಡರ್ ಇಷ್ಯೂ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇತರ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯ ಕರೆಯುತ್ತೇನೆಂದು ಹೇಳಿದ್ದಾರೆ ಎನ್ನುವ ವಿಷಯ ಪತ್ರಿಕೆಗಳಲ್ಲಿ ಬಂತು. ಅದು ಸ್ವಲ್ಪ ಅಪಾಯಕ್ಕೆ ಅವಕಾಶವಾಯಿತು. ಆದರೆ ಆಮೇಲೆ ಮಾನ್ಯ ಮುಖ್ಯಮಂತ್ರಿಗಳು ತಾವು ಆ ರೀತಿ ಹೇಳಲಿಲ್ಲ ಎಂದು ಸ್ಪಷ್ಟೀಕರಣ ಕೊಟ್ಟರು. ಅವರು ಆ ರೀತಿ ಹೇಳಲಿಕ್ಕೂ

ಸಾಧ್ಯವಿಲ್ಲ, ಮಾನ್ಯ ಮುಖ್ಯಮಂತ್ರಿಗಳಾಗಲೀ, ಈ ಕಡೆ ಇರತಕ್ಕಂತಹ ಮಾನ್ಯ ಸದಸ್ಯರಗಳಾಗಲೀ, ಕನ್ನಡ ನಾಡಿನ ಮಣ್ಣಿನ ಋಣವನ್ನು ತಿಂದಂತಹ ಯಾರೇ ವ್ಯಕ್ತಿ ಈ ಮಾತನ್ನು ಹೇಳಿರಲಿಕ್ಕೆ ಸಾಧ್ಯವಿಲ್ಲ, ಕನ್ನಡ ನಾಡಿಗೆ ದ್ರೋಹ ಮಾಡಲಿಕ್ಕೆ ಸಾಧ್ಯವಿಲ್ಲ, ಈ ನಾಡಿನ ಒಂದು ಇಂಚು ಜಾಗ ಆ ಕಡೆ ಈ ಕಡೆ ಹೋಗುವುದಕ್ಕೆ ಸಾಧ್ಯವಿಲ್ಲ, ಇವತ್ತು ಗಡಿ ಸಮಸ್ಯೆಯ ವಿಚಾರದಲ್ಲಿ ಮಹಾಜನ್ ಆಯೋಗದ ವರದಿಯೇ ಅಂತಿಮ. ಒಂದು ಇಂಚು ಭೂಮಿ ಆ ಕಡೆ ಈ ಕಡೆ ಹೋಗದೇ ಇರುವಂತಹ ಕಾಲದಲ್ಲಿ ಯಾರೋ ತಲೆ ಕೆಟ್ಟವನು ಏನು ಬೇಕಾದರೂ ಮಾಡಬಹುದು. ಈ ರಾಜ್ಯದ ಜನರಾದ ನಾವೆಲ್ಲಾ ಈ ವಿಷಯದಲ್ಲಿ ಒಂದಾಗಿದ್ದೇವೆ. ಒಂದು ಇಂಚು ಭೂಮಿ ಕೂಡ ಆ ಕಡೆ ಈ ಕಡೆ ಬಿಡಲಿಕ್ಕೆ ಸಾಧ್ಯವಿಲ್ಲ, ರಾಜಕೀಯ ಲಾಭಕ್ಕಾಗಿ ಯಾರು ಏನು ಮಾತನಾಡಿದರೂ ಕೂಡ ನಾವು ಈ ರಾಜ್ಯದ ಹಿತವನ್ನು ಕಡೆಗಣಿಸಲಿಕ್ಕಾಗುವುದಿಲ್ಲ, ಸನ್ಮಾನ್ಯ ಮುಖ್ಯಮಂತ್ರಿಗಳಿಗಾಗಲೀ, ಆ ಕಡೆ ಈ ಕಡೆ ಇರತಕ್ಕ ಮಾನ್ಯ ಸದಸ್ಯರುಗಳಿಗಾಗಲೀ ಈ ವಿಷಯದಲ್ಲಿ ಯಾವುದೇ ಗೊಂದಲ ಇಲ್ಲ, ಇದನ್ನು ಮೀರಿ ಯಾವುದೇ ಸಂಸ್ಥೆ ಈ ರೀತಿಯ ವರ್ತನೆಯನ್ನು ಮಾಡಿದರೆ ಅದು ಅಕ್ಷಮ್ಯ ಅಪರಾಧವಾಗುತ್ತದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಾರೆಂದು ಆಶಿಸುತ್ತೇನೆ.

ಅಧ್ಯಕ್ಷರು : ನಿಮ್ಮ ಲೀಡರ್ ಮಾತನಾಡಿದ ಮೇಲೆ ನೀವು ಮಾತನಾಡುವುದು ಏನು ಇರುತ್ತದೆ. ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ನೀವು ಇದನ್ನು ಅರ್ಥಮಾಡಿಕೊಳ್ಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಅಧ್ಯಕ್ಷರೇ, ಮಹಾರಾಷ್ಟ್ರ ವಿಧಾನಸಭೆಯಲ್ಲಿ ಈ ರೀತಿಯ ನಿರ್ಣಯವನ್ನು ಅಂಗೀಕರಿಸಿರುವುದು. ಮಹತ್ವದ ವಿಷಯವಾದರೂ ನಮ್ಮ ರಾಜ್ಯದೊಳಗೆ ಇರತಕ್ಕ ಸಂಸ್ಥೆಗಳು, ಆದರಲ್ಲೂ ಕೂಡ ಈ ಸದನದಲ್ಲಿ ಅಂಗೀಕಾರ ನೀಡುವ ಶಾಸನದಿಂದ ಸ್ಥಾಪನೆಯಾದ ಸಂಸ್ಥೆಗಳು. ಅದು ಬೆಳಗಾವಿ ತಾಲ್ಲೂಕು ಪಂಚಾಯಿತಿ ಇರಬಹುದು, ಖಾನಾಪುರ ತಾಲ್ಲೂಕು ಪಂಚಾಯಿತಿ ಇರಬಹುದು. ಇವತ್ತು ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂಬ ಒಂದು ನಿರ್ಣಯವನ್ನು ಅಂಗೀಕಾರ ಮಾಡುವ ಮಟ್ಟಕ್ಕೆ ಈ ತಾಲ್ಲೂಕು ಪಂಚಾಯತಿಗಳು ಹೋಗಿವೆ. ಎಂಬುದನ್ನು ನೋಡಿದರೆ. ಈ ಶಾಸನ ಸಭೆಯಿಂದ ಸ್ಥಾಪನೆಯಾಗಿರತಕ್ಕಂತಹ ಈ ಸಂಸ್ಥೆಗಳು ಯಾವ ಅಸ್ತಿತ್ವವನ್ನು ಪಡೆದಿವೆ ಎಂಬುದು ಬಹಳಮುಖ್ಯವಾದಂತಹ ವಿಷಯವಾಗಿದೆ. ಈ ಶಾಸನ ಸಭೆಯ ಒಂದು ಕಾನೂನಿನ ವ್ಯಾಪ್ತಿಯಲ್ಲಿ ಸೃಷ್ಟಿಯಾದಂತಹ ಈ ತಾಲ್ಲೂಕು ಪಂಚಾಯಿತಿಗಳು ಉಳಿಯಬೇಕು ಎನ್ನುವುದಾದರೆ ಈ ಶಾಸನ ಸಭೆಗೆ ಮಾನ್ಯತೆ ಕೊಡಬೇಕೇ ವಿನಹ ಶಾಸನದ ವಿರುದ್ಧವಾಗಿ ಹೋಗಬಾರದು. ಹಾಗೆ ಹೋದಲ್ಲಿ ಅವುಗಳು ಈ ಸದನದ ವಿರುದ್ಧವಾಗಿ ನಡೆದುಕೊಂಡಂತಾಗುತ್ತದೆ. ಇದನ್ನು ಸರ್ಕಾರವು ಬಹಳ ಲಘುವಾಗಿ ಪರಿಗಣಿಸಬಾರದು. ಮಾನ್ಯ ಮುಖ್ಯಮಂತ್ರಿಗಳು ಈ ತಾಲ್ಲೂಕು ಪಂಚಾಯಿತಿಗಳನ್ನು ಕೂಡಲೇ ರದ್ದು ಪಡಿಸಲು ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : (ಗುರುಮಿಠಕಲ್) : ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ಮಾತನಾಡತಕ್ಕಂತಹ ಉದ್ದೇಶ ಇಷ್ಟೇ. ಮಹಾಜನ್ ಆಯೋಗದ ವರದಿಯೇ ಅಂತಿಮವೆಂದು ನಾವು ಒಪ್ಪಿಕೊಂಡಿರುವಾಗ ಪುನಃ ಅದನ್ನು ಪುನರುಚ್ಚಾರ ಮಾಡತಕ್ಕದ್ದು ಅಥವಾ ಅದರ ಬಗ್ಗೆ ರಿವ್ಯೂ ಮಾಡತಕ್ಕ ಪ್ರಶ್ನೆಯೇ ಇಲ್ಲಿ ಉದ್ಭವಿಸುವುದಿಲ್ಲ.

ಎರಡನೆಯದಾಗಿ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದಂತೆ. ಯಾವ ಒಂದು ಸಂಸ್ಥೆಗಳು ಈ ವಿಧಾನ ಸಭೆಯಿಂದ ತಯಾರಾಗಿವೆಯೋ, ಆ ಸಂಸ್ಥೆಗಳು ಇವತ್ತಿನ ದಿವಸ ನಾವು ಬೇರೆ ಹೋಗುತ್ತೇವೆ. ಮಹಾರಾಷ್ಟ್ರಕ್ಕೆ ಸೇರುತ್ತೇವೆ. ಎಂದೇಳಿ

ನಿರ್ಣಯ ಅಂಗೀಕರಿಸುವುದು ಸರಿಯಲ್ಲ, ಅದಕ್ಕಾಗಿ ಸರ್ಕಾರದವರು ಆ ತಾಲ್ಲೂಕು ಪಂಚಾಯಿತಿಗಳನ್ನು ಸೂಪರ್‌ಸೀಡ್ ಮಾಡಬೇಕು ಮತ್ತು ಯಾವ ಸೆಕ್ರೆಟರಿಗಳು, ಬಿ.ಡಿ.ಓ. ಅಥವಾ ಚೀಫ್ ಎಗ್ಸಿಕ್ಯೂಟಿವ ಆಫೀಸರ್ಸ್‌ಗಳು ಆ ರೆಸಲ್ಯೂಷನ್ ಅನ್ನು ಬರೆದಿರುತ್ತಾರೆ ಅಥವಾ ಕಮೂನಿಕೇಟ್ ಮಾಡಿರುತ್ತಾರೆ ಅಂತಹ ಅಧಿಕಾರಿಗಳ ಮೇಲೆ ಕೂಡ ಕ್ರಮ ತೆಗೆದುಕೊಳ್ಳಬೇಕು. ಅವರನ್ನು ಸಸ್ಪೆಂಡ್ ಮಾಡಬೇಕು. ದಯವಿಟ್ಟು ಸರ್ಕಾರದವರು ಈ ಕೆಲಸವನ್ನು ಮಾಡಿ.

ಶ್ರೀ ಎಸ್. ಬಂಗಾರಪ್ಪ (ಸೊರಬ) : ಮಾನ್ಯ ಸಭಾಧ್ಯಕ್ಷರೆ ಬಹಳ ಉದ್ದನೆಯ ಚರ್ಚೆ ಇದಕ್ಕೇನೂ ಬೇಕಾಗಿಲ್ಲ, ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿರ ತಕ್ಕಂತದ್ದು ಎರಡು ವಿಷಯ. ಒಂದು ಮಹಾಜನ್ ಆಯಾಗದ ವರದಿಯ ವಿಚಾರದಲ್ಲಿ ಮಹಾರಾಷ್ಟ್ರದ ಶಾಸನ ಸಭೆಯಲ್ಲಿ ಅವರು ತೆಗೆದುಕೊಂಡಿರತಕ್ಕಂತಹ ನಿರ್ಣಯವನ್ನು ಪ್ರಸ್ತಾಪ ಮಾಡಿದ್ದಾರೆ. ಎರಡನೆಯದಾಗಿ ನಾವು ಹಿಂದೆ ಈ ಸದನ ತೆಗೆದುಕೊಂಡಿರತಕ್ಕಂತಹ ನಿರ್ಣಯದ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಒಂದು ವಿಷಯ. ತಾಲ್ಲೂಕು ಪಂಚಾಯತಿ ಇತ್ಯಾದಿಯವರು ಅವರೇನು ನಿರ್ಣಯ ತೆಗೆದುಕೊಂಡಿದ್ದಾರೆ. ಅದು ಕಾನೂನಿಗೆ ಮೀರಿರತಕ್ಕಂತ ಕಾನೂನು ವ್ಯಾಪ್ತಿಗೆ ಅವೆಲ್ಲಾ ಬರುವುದಿಲ್ಲ, ಯಾರೋ ಹೇಳಿರುತ್ತಾರೆ ಅವರು ಒಂದು ನಿರ್ಣಯ ಎಂದು ಮಾಡಿಕೊಂಡಿರುತ್ತಾರೆ. ಅದುದರಿಂದ ಅದನ್ನು ಕುರಿತು ಅದನ್ನು ಸರ್ಕಾರ ಕೂಡ ಗಂಭೀರವಾಗಿ ಗಮನಕ್ಕೆ ತೆಗೆದುಕೊಳ್ಳತಕ್ಕಂತಹ ವಿಚಾರ. ತೆಗೆದುಕೊಳ್ಳತಕ್ಕಂತಹ ಕಾರ್ಯಕ್ರಮಗಳ ಬಗ್ಗೆ ಕಾಗೋಡು ತಿಮ್ಮಪ್ಪನವರು ಹೇಳಿದ್ದಾರೆ. ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದಾರೆ ಹಾಗೆ ಬೇರೆಯವರು ಕೂಡ ಹೇಳಿದ್ದಾರೆ. ಅದರ ಬಗ್ಗೆ ನಾವು ವಿಚಾರ ಮಾಡುವುದಿಲ್ಲ, ಅವರು ಏನು ವಿಚಾರ ಮಾಡುತ್ತಾರೋ ಮಾಡಲಿ. ಆದರೆ ಮಹಾರಾಷ್ಟ್ರ ಶಾಸನಸಭೆಯಲ್ಲಿ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಅಂದ ಕೂಡಲೆ ನಾವು ಮತ್ತೊಂದು ನಿರ್ಣಯವನ್ನು ತೆಗೆದುಕೊಳ್ಳತಕ್ಕಂತಹ ಅವಶ್ಯಕತೆ ಏನು ಇಲ್ಲ, ಅದು ಬೇಕಾಗಿಲ್ಲ, ನಿಯೋಗ ಹೋಗಬೇಕೆಂದು ವಾಟಾಳ್ ನಾಗರಾಜ್‌ರವರು ಏನು ಅಭಿಪ್ರಾಯ ಕೊಟ್ಟಿದ್ದಾರೆ. ನಾವು ಈಗ ಜೊತೆಯಲ್ಲೇ ಕುಳಿತಿರೂಬಹುದು ಆದರೆ ಅದಕ್ಕೆ ನನ್ನ ಸಹಮತವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅನೇಕ ಬಾರಿ ಈ ತರಹ ಆಗಿವೆ.

ಶ್ರೀ ಎಸ್. ಬಂಗಾರಪ್ಪ : ಏಕೆಂದರೆ ಮಹಾರಾಷ್ಟ್ರದ ಶಾಸನ ಸಭೆಯಲ್ಲಿ ನಿರ್ಣಯ ಪಾಸ್ ಮಾಡಿರಬಹುದು. ಅದಕ್ಕೆ ಇಲ್ಲದ್ದನ್ನೆಲ್ಲಾ ಪ್ರಾಮುಖ್ಯತೆ ಕೊಡತಕ್ಕಂತಹ ಅವಶ್ಯಕತೆ ನಮಗೆ ಕಾಣಿಸುವುದಿಲ್ಲ, ಏಕೆಂದರೆ ಈಗ ಅಲ್ಲಿರತಕ್ಕಂತಹದ್ದು ಬಿ.ಜೆ.ಪಿ. ಮತ್ತು ಶಿವಸೇನೆ ಜೊತೆಗೂಡಿರತಕ್ಕಂತಹ ಒಂದು ಸರ್ಕಾರ, ಅವರು ನಿರ್ಣಯವನ್ನು ಮಾಡಿದ್ದಾರೆ. ಏಕೆ, ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಕೂಡ ಅನೇಕ ಸಾರಿ ನಿರ್ಣಯವನ್ನು ಅವರು ಮಾಡಿದ್ದಾರೆ. ಅದು ಹಿಂದೆ ಕೂಡ ಬಂದಿದೆ. ಇದು ನಮಗೇನು ಹೊಸದೇನಲ್ಲ, ಇಲ್ಲಿ ಹಿಂದೆ ನಾವೇನೂ ಈ ಶಾಸನ ಸಭೆಯಲ್ಲಿ ಮಹಾಜನ್ ಆಯೋಗದ ವರದಿಯನ್ನು ಯಥಾವತ್ತಾಗಿ ಜಾರಿಗೆ ಕೊಡಬೇಕೆಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅದಕ್ಕೆ ಎಲ್ಲಾ ರಾಜಕೀಯ ಪಕ್ಷಗಳು ಕೂಡ ಇಲ್ಲಿ ನಮ್ಮ ಶಾಸನಸಭೆಯಲ್ಲಿ ಬದ್ಧವಾಗಿದ್ದೇವೆ. ಎರಡು ಸದನದಲ್ಲಿ ಈ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಕೇಂದ್ರ ಸರ್ಕಾರಕ್ಕೂ ಕೂಡ ಅದನ್ನು ನಾವು ಕಳುಹಿಸಿದ್ದೇವೆ. ಅದಕ್ಕೆ ನಾನೇನು ಸಲಹೆ ಕೊಡುತ್ತಿದ್ದೇನೆಂದರೆ, ಸಭಾಧ್ಯಕ್ಷರೆ, ಮಹಾರಾಷ್ಟ್ರದ ಶಾಸನ ಸಭೆಯಲ್ಲಿ ಆ ನಿರ್ಣಯ ತೆಗೆದುಕೊಂಡರೆ ನಮ್ಮ ಕರ್ನಾಟಕ ಶಾಸನ ಸಭೆಯಲ್ಲಿ ತೆಗೆದುಕೊಂಡಿರತಕ್ಕ ಅಭಿಪ್ರಾಯಕ್ಕೆ ನಮ್ಮ ನಿರ್ಣಯಕ್ಕೆ ನಾವು ಬದ್ಧರಾಗಿದ್ದೇವೆ. ಕೇಂದ್ರ ಸರ್ಕಾರದವರು ಮಹಾಜನ್ ಆಯೋಗದವರದಿಗೆ ಸಂಬಂಧಪಟ್ಟಂತೆ ನಾವೇನು ನಿರ್ಣಯ

ತೆಗೆದುಕೊಂಡಿದ್ದೇವೆ. ಅದನ್ನು ಯಥಾವತ್ತಾಗಿ ನೀವು ಜಾರಿಗೆ ಕೊಡಬೇಕು. ಏಕೆಂದರೆ ನೀವೆ ನೇಮಕ ಮಾಡಿರತಕ್ಕಂತಹ ಮಹಾಜನ್ ಆಯೋಗ ಅದು. ಈ ದೃಷ್ಟಿಯಿರುವುದರಿಂದ ಮುಖ್ಯಮಂತ್ರಿಗಳು ಈ ಸದನದಲ್ಲಿ ವ್ಯಕ್ತ ಪಟ್ಟಿರತಕ್ಕಂತಹ ಸರ್ವಾನುಮತದ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡು. ಇದಕ್ಕೆ ತಮ್ಮ ಸಹಮತ ಇದೆಯೆಂದು ಭಾವಿಸಿದ್ದೇನೆ. ಇದು ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದಂತಹ ಕಾರ್ಯಕಲಾಪ, ನಾವು ಮತ್ತೆ ಕೂಡ ಪುನರುಚ್ಚಾರ ಮಾಡುತ್ತೇವೆ. ಮಹಾಜನ್ ಆಯೋಗ ವರದಿಯನ್ನು ಜಾರಿಗೆ ಕೊಡಬೇಕೆಂದು ಅಷ್ಟೇ ಹೇಳಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಈ ವಿಚಾರ ಮುಕ್ತಾಯಗೊಳಿಸುವುದು ಬಹಳ ಒಳ್ಳೆಯದು. ಮತ್ತೆ ನಿಯೋಗ ಮತ್ತೊಂದು ನಿರ್ಣಯ ಹೀಗೆ ಮತ್ತೆ ಈ ಸುದ್ದಿಗೆ ಹೋಗತಕ್ಕಂತಹ ಅವಶ್ಯಕತೆ ನನಗೆ ಕಾಣಿಸುವುದಿಲ್ಲ. ಸಭಾ ನಾಯಕರು ಕೇಂದ್ರ ಸರ್ಕಾರಕ್ಕೆ ಅದರ ಬಗ್ಗೆ ಪತ್ರ ಬರೆದರೆ ಸಾಕು. ನಮಗೆ ಗೊತ್ತಿರುವ ಹಾಗೆ ಕೇಂದ್ರ ಸರ್ಕಾರದವರು ಏನೂ ಮಾಡುವುದಿಲ್ಲ. ಇಲ್ಲದ್ದೆಲ್ಲಾ ಪ್ರಾಮುಖ್ಯತೆಯನ್ನು ಮಹಾರಾಷ್ಟ್ರದ ಶಾಸನ ಸಭೆ ತೆಗೆದುಕೊಂಡಿರುವ ನಿರ್ಣಯಕ್ಕೆ ಕೊಡುವುದು ನನಗೆ ಕಾಣಿಸುವುದಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಸಭಾಧ್ಯಕ್ಷರೆ ಮಹಾಜನ್ ಆಯೋಗದ ವರದಿಯ ಬಗ್ಗೆ ಬಹಳ ಮಾನ್ಯ ಹಿರಿಯ ಸದಸ್ಯರು ಮಾತನಾಡಿದರು. ಅದು ಮಹಾರಾಷ್ಟ್ರ ಶಾಸನ ಸಭೆ ತೆಗೆದುಕೊಂಡಿರತಕ್ಕಂತಹ ನಿರ್ಣಯ, ಆದರೆ ಅದೇನು ಅಪಾಯಕಾರಿಯಲ್ಲ. ರಾಜ್ಯದೊಳಗೆ ನಿರ್ಣಯ ಮಾಡಿರುವುದು ಬಹಳ ಅಪಾಯಕಾರಿ. ಜೊತೆಗೆ ವಿಕೇಂದ್ರಿಕರಣ ಎಂದರೆ ಏನು ತಿಳಿದುಕೊಂಡಿರುತ್ತಾರೆಂದರೆ. ಆಡಳಿತ ವಿಕೇಂದ್ರಿಕರಣ ಮಾಡಿದ್ದಾರೆಂದರೆ, ಯವ ತಾಲ್ಲೂಕು ಪಂಚಾಯಿತಿಯನ್ನು ಯಾವ ರಾಜ್ಯಕ್ಕಾದರು ಸೇರಿಸಿಕೊಳ್ಳಬಹುದೆಂದು ತೀರ್ಮಾನ ಮಾಡಿಕೊಂಡು, ಈ ರೀತಿಯ ಅನುಭವ ಅವರಿಗೆ ಏನಾದರೂ ಆಗಿತ್ತೊ ಏನೋ ಗೊತ್ತಿಲ್ಲ. ಆದರೆ ವಿಕೇಂದ್ರಿಕರಣವೇಂದರೆ ರಾಜ್ಯದ ಅಭಿವೃದ್ಧಿಯ ವಿಕೇಂದ್ರಿಕರಣ. ಯಾವ್ಯಾವುದನ್ನೊ ತೆಗೆದುಕೊಂಡು ಹೋಗಿ ಯಾವ್ಯಾವ ರಾಜ್ಯಕ್ಕೊ ಸೇರಿಸಿಕೊಳ್ಳುವುದಲ್ಲ ಎನ್ನುವುದನ್ನು ತಾವು ದಯವಿಟ್ಟು ಅವರ ಗಮನಕ್ಕೆ ತಂದು, ಮೊದಲು ಇದನ್ನು ಮುಟ್ಟುಗೋಲು ಹಾಕಿಕೊಂಡು, ಆ ಪಂಚಾಯತಿ ಬಗ್ಗೆ ಕ್ರಮ ತೆಗೆದುಕೊಂಡು ದಯವಿಟ್ಟು ಅವಿರೋಧವಾಗಿ ನಿರ್ಣಯ ಮಾಡಬೇಕೆಂಬುದು ನನ್ನ ಅಭಿಪ್ರಾಯ.

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ) : ಮಾನ್ಯ ಸಭಾಧ್ಯಕ್ಷರೆ. ಈಗ ಈ ವಿಚಾರವನ್ನು ಇಲ್ಲಿ ನಾವು ಬಹಳ ಸಂಪ್ರದಾಯಿಕವಾಗಿ ಇವತ್ತು ಎತ್ತುತ್ತಿದ್ದೇವೆ. ಏಕೆಂದರೆ ಈ ಬಗ್ಗೆ ಕೆಲವು ಚಟುವಟಿಕೆಗಳು ನಡೆದ ಕಾರಣ, ಈ ವಿಷಯ ಪುನಃ ಇಲ್ಲಿ ಪ್ರಸ್ತಾಪವಾಗಿದೆ. ಮಹಾರಾಷ್ಟ್ರ ವಿಧಾನಸಭೆಯಲ್ಲಿ ಅವರು ನಿರ್ಣಯ ಮಾಡಿದರು ಎಂದು ನಾವು ನಿರ್ಣಯ ಮಾಡುವುದು ಬೇಕಾಗಿಲ್ಲ ಎನ್ನತಕ್ಕ ವಾದಕ್ಕೆ ನಾನು ಒಪ್ಪುವುದಿಲ್ಲ. ನಾನು ಹೇಳುವುದೇನೆಂದರೆ. ಅಲ್ಲಿ ಅವರು ಯಾವುದಕ್ಕೆ ನಿರ್ಣಯ ಮಾಡಿದ್ದಾರೆ ಅದಕ್ಕೆ ನಾವು ಇಲ್ಲಿ ನಿರ್ಣಯ ಮಾಡಲೇ ಬೇಕು. ಏಕೆಂದು ಹೇಳಿದರೆ. ಇದೆಲ್ಲಾ ಬಹಳ ಭಾವನಾತ್ಮಕ ವಿಚಾರಗಳಿಗೆ ಸಂಬಂಧಪಟ್ಟ ವಿಚಾರ. ಇದು ಉಪಾಯದ ಪ್ರಶ್ನೆಯಲ್ಲ. ಅದ್ದರಿಂದ ಸನ್ಮಾನ್ಯ ಅಧ್ಯಕ್ಷರೆ. ನನ್ನ ಸೂಚನೆ ಏನೆಂದರೆ. ಆಗಾಗ್ಗೆ ಇದು ಪ್ರಸ್ತಾಪವಾಗುತ್ತದೆ. ಏಕೆಂದರೆ ತಾವು ತಿಳಿದುಕೊಳ್ಳಬೇಕು. ಒಂದು ರಾಜ್ಯದ ವಿಧಾನಸಭೆಯಲ್ಲಿ ಇವತ್ತು ನಿರ್ಣಯ ಆದಾಗ. ಬರೀ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಕಾಗದ ಬರೆಯುವುದರಿಂದ ಪರಿಹಾರವಾಗುವುದಿಲ್ಲ. ಈ ಸದನದಲ್ಲಿ ಒಕ್ಕೊರಲಿನಿಂದ ಬೆಳಗಾಂ ನಮಗೆ ಸೇರಿದ್ದುದು. ಮಹಾಜನ್ ಆಯೋಗದ ವರದಿಯನ್ನು ಅನುಷ್ಠಾನ ಮಾಡಲೇಬೇಕು ಎಂದು ಹೇಳತಕ್ಕಂತಹ ನಮ್ಮ ರಾಜ್ಯದ ಜನರ ಒಂದು ಸಂಕಲ್ಪವನ್ನು ನಾವು ಆಯಾವೇದಿಕೆಯಿಂದ ಹೇಳಬೇಕು. ಎನ್ನುವಂಥದ್ದು ನನ್ನ ಒತ್ತಾಯಪೂರ್ವಕವಾದಂತ ವಿನಂತಿ.

ಎರಡನೆಯ ವಿಚಾರವೇನೆಂದರೆ. ಬೆಳಗಾಂ ಬಗ್ಗೆ ಈಗಾಗಲೇ ಮಹಾರಾಷ್ಟ್ರದ ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಶರದ್‌ಪವಾರ್‌ರವರು ಕೂಡ ಬೆಳಗಾಂ ಕಿಡೆಗೆ ಬಂದಾಗ ಹೇಳಿದರು. ನೀವು ಬೆಳಗಾಂ ಮಹಾರಾಷ್ಟ್ರಕ್ಕೆ ಬರುತ್ತದೆಂದು ಹೇಳತಕ್ಕಂತಹ ಮಾತು ಅದು ಕಸಸಿನ ಗಂಟು. ಅದನ್ನು ನೀವು ಪುನಃ ಒತ್ತಾಯ ಮಾಡಿತಕ್ಕಂತದ್ದು ಸರಿಯಲ್ಲ you will have to reconcile with the position. ಎಂದು ಹೇಳಿರುವುದು ಕೂಡ ಪತ್ರಿಕೆಯಲ್ಲಿ ಬಂದಿದೆ. ಆದುದರಿಂದ ಈ ಒಂದು ಹಿನ್ನೆಲೆ ಕೂಡ ಇದೆ. ಅಧ್ಯಕ್ಷರೆ, ನಾವೆಲ್ಲರೂ ಒಪ್ಪಿಕೊಂಡಂತೆ ಕೇರಳದ ಹಿಂದಿನ ಎಲ್ಲಾ ಪ್ರಮುಖರು ಕೂಡ ಒಪ್ಪಿರಕೊಂಡಂಥ ನಿರ್ವಿವಾದವಾದಂತಹ ವಿಚಾರವೇನೆಂದರೆ ಕಾಸರಗೋಡು ಇವತ್ತು ಕರ್ನಾಟಕಕ್ಕೆ ಸೇರಬೇಕು, ಸೇರಲೇ ಬೇಕಾದ್ದು ಎನ್ನುವ ಮಾತನ್ನು ಕೂಡ. ಇವತ್ತು ಒಂದು ಸಭೆಯಲ್ಲಿ ಸನ್ಮಾನ್ಯ ಕೈಯರ್ ಕಿಜ್ಞ ರೈ ಅವರಿಗೆ ಸನ್ಮಾನವಾದಾಗ ನಾನು ಹೇಳಿದೆ. ಎಲ್ಲರೂ ಒಪ್ಪಿಕೊಂಡ ವಿಚಾರಗಳನ್ನು ನಾವು ಒತ್ತಾಯ ಮಾಡುವುದಕ್ಕೆ ಏನು ಅಡ್ಡಿಯಿದೆ? ನಾವು ಒತ್ತಾಯ ಮಾಡಬೇಕಾಗುತ್ತದೆಂದು ಹೇಳುವಾಗ. ಮಾನ್ಯ ಮುಖ್ಯಮಂತ್ರಿಯವರು ಆಮೇಲೆ ಉತ್ತರ ಕೊಟ್ಟರು, ಇದನ್ನು ಪುನಃ ಏಕೆ ಕೆದಕುತ್ತಿದ್ದೀರಿ ಎನ್ನುವ ಒಂದು ಮಾತನ್ನು ಹೇಳಿದರು. ತಾವು ಸ್ವಲ್ಪ ಗಮನ ಇಟ್ಟುಕೊಳ್ಳಬೇಕು ಏಕೆಂದು ಹೇಳಿದರೆ. ಮೊನ್ನೆ ಆ ಹೇಳಿಕೆಯನ್ನು ಕೊಟ್ಟು ಒಂದು ರೀತಿಯ ಜಾಗ್ರತೆ. ಒಂದು ರೀತಿಯ ಆಸೆ ಆಕಾಂಕ್ಷೆಗಳಿಗೆ ಪುನಃ ನೀರೆರೆಯತಕ್ಕಂತಹ ಕೆಲಸ ಆಗಿದೆ ನಮ್ಮ ಕನ್ನಡಿಗರಿಗೆ ಮೊದಲು ಏನಾಗಿತ್ತೆಂದರೆ, ಕನ್ನಡ ಶಾಲೆಗಳನ್ನು ಮುಚ್ಚುತ್ತಿದ್ದರು, ಕಾಸರಗೋಡಿನಲ್ಲಿದ್ದಂಥ ಕನ್ನಡ ಬೋರ್ಡ್‌ಗಳು ಹೋಗಿ ಮಳೆಯಾಳಿ ಬೋರ್ಡ್‌ಗಳು ಬರುತ್ತಾ ಇತ್ತು. ನಾವು ಸ್ವಲ್ಪ ಎಚ್ಚರಿಕೆ ಮಾಡಿದ ಮೇಲೆ ಅಲ್ಲಿಯ ಜನರಲ್ಲಿ ಜಾಗ್ರತೆ ಮೂಡಿದ ಮೇಲೆ ಇವತ್ತು ಮಲೆಯಾಳಿ ಬೋರ್ಡ್‌ಗಳನ್ನು ಅಳಿಸಿ ಕನ್ನಡ ಬೋರ್ಡ್‌ಗಳನ್ನು ಬರೆಯತಕ್ಕಂತಹ ಕೆಲಸ ಪುನಃ ಕಾಸರಗೋಡಿನಲ್ಲಿ ಪ್ರಾರಂಭವಾಗಿದೆ. ಅಲ್ಲಿ ಮುಚ್ಚಬೇಕಾದಂತಹ ಶಾಲೆಗಳನ್ನು ಇವತ್ತು ತೆರೆದಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ. ಇದರ ಪರಿಣಾಮ ನಾವು ಇಲ್ಲಿ ಕುಳಿತುಕೊಂಡು ಏಕೆ ಸುಮ್ಮನೆ ನೆಮ್ಮದಿ ಇದೆ. ಎಲ್ಲಾ ಇತ್ಯಾರ್ಥವಾಗಿದೆ. ನಾವು ಏತಕ್ಕೆ ಎತ್ತಬೇಕೆಂದು ಬಹಳ ಸುಲಭವಾಗಿ ಹೇಳಬಹುದು. ಆದರೆ ಇದು ಅಲ್ಲಿಯ ಕನ್ನಡಿಗರ ಜೀವನ್ಮರಣದ ಪ್ರಶ್ನೆ. ಕಾಸರಗೋಡಿನಲ್ಲಾಗಲಿ ಅಥವಾ ಆ ಭಾಗದಲ್ಲರತಕ್ಕಂತಹ ಜನರಿಗೆ ನಾವು ಕರ್ನಾಟಕದವರು ಕೈಬಿಟ್ಟಿದ್ದಾರೆಂದು ಹೇಳಿದರೆ ಅವರನ್ನು ಕೇಳುವವರು ಯಾರು ಇರುವುದಿಲ್ಲ, ಅದರಿಂದ ಒಂದು ಅನಾಥ ಪ್ರಜ್ಞೆ ಅವರಲ್ಲಿ ಬರುತ್ತದೆ. ಆದುದರಿಂದ ಅಧ್ಯಕ್ಷರೆ ಕಾಸರಗೋಡು ವಿಚಾರ ಮತ್ತು ಬೆಳಗಾಂ ವಿಚಾರ ಒಟ್ಟಾಗಿ ಇಲ್ಲಿ ಮಹಾಜನ್ ಆಯೋಗದ ವರದಿಯನ್ನು ಅನುಷ್ಠಾನ ಮಾಡತಕ್ಕಂಥ ಕಾಲದಲ್ಲಿ ನಮ್ಮ ರಾಜ್ಯದ ಸಂಕಲ್ಪವನ್ನು ವಿಧಾನಮಂಡದಲದ ಮೂಲಕ ವ್ಯಕ್ತಪಡಿಸತಕ್ಕಂಥದ್ದು ಬಹಳ ಸೂಕ್ತವಿದೆ. ಅದಕ್ಕೆ ತಾವು ಹಾಗೂ ಸಭಾನಾಯಕರು ಒಪ್ಪಿಗೆ ಕೊಡಬೇಕೆಂದು ನಾನು ಹೇಳುತ್ತೇನೆ.

+ ಶ್ರೀ ಕುಂಬಳೆ ಸುಂದರ್‌ರಾವ್ (ಸುರತ್ಕಲ್) : ಮಾನ್ಯ ಸಭಾಧ್ಯಕ್ಷರೆ. ಮಾನ್ಯ ಮಾಜಿ ಮುಖ್ಯಮಂತ್ರಿಗಳು ನಮ್ಮ ಕೆಲಸವನ್ನು ಬಹಳ ಹಗುರ ಮಾಡಿದ್ದಾರೆ. ಆದರೂ ಸಹ ಒಂದು ಮುಖ್ಯವಾದ ವಿಷಯವನ್ನು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಬಹಳ ಸಲ ಬೆಳಗಾಂ ಪ್ರಸ್ತಾಪ ಬಂದಾಗ ಮಹಾಜನ್ ಆಯೋಗದ ವರದಿ ಮಹಾಜನ್ ಆಯೋಗದ ವರದಿ ಎಂದು ನಾವೆಲ್ಲಾ ಹೇಳುತ್ತಾ ಇದ್ದೇವೆ. ಆ ವರದಿಯ ಪ್ರಕಾರ ಬೆಳಗಾವಿ ಆ ಕಡೆ ಹೋಗತಕ್ಕದ್ದಲ್ಲ, ಅದು ನಮ್ಮದೇ ಆಗಿ ಉಳಿಯತಕ್ಕ ಈ ಭರವಸೆಯ ಮಾತು. ನಿರ್ಧಾರದ ಮಾತನ್ನು ನಾವು ಹೇಳುತ್ತೇವೆ.

ಅದೇ ಮಹಜನ್ ಆಯೋಗದ ವರದಿಯಲ್ಲಿ ಕಾಸರಗೋಡು ಕರ್ನಾಟಕದ ಭಾಗ ಎಂದು ಹೇಳಲ್ಪಟ್ಟಿದೆ. ಅದು ನಮಗೆ ಹಿಂದಾಗುತ್ತಿದ್ದೇವೇನೋ. ನಮ್ಮ ಸ್ವರ ಕಡಿಮೆಯಾಗುತ್ತದೇನೋ ಎಂದು ನನಗೆ ಅನ್ನಿಸುತ್ತದೆ.

ಕಾಸರಗೋಡಿನಲ್ಲಿ ಮಲೆಯಾಳಿ ತರಗತಿಗಳನ್ನು ಹೆಚ್ಚಾಗಿ ಮಾಡಿ ಕನ್ನಡ ತರಗತಿಯನ್ನು ಮುಚ್ಚುವ ಸ್ಥಿತಿ ಇತ್ತು. ಈಗ ಸ್ವಲ್ಪ ಬದಲಾವಣೆ ಆಗಿದೆ. ಆದರೆ ಈಗ ಪುನಃ ಆ ಉದ್ದೇಶ ಹೋಗುತ್ತಿದೆ. ನಾವು ಗಟ್ಟಿಯಾಗಿ ಎದ್ದು ನಿಂತಾಗ ಮಲೆಯಾಳಿಗಳು ಸ್ವಲ್ಪ ನಮ್ಮ ಮಾತು ಕೇಳುತ್ತಾರೆ. ಮಲೆಯಾಳಿಗಳು ಉತ್ತರ ಕೊಡುವುದನ್ನು ನಿಲ್ಲಿಸುತ್ತಾರೆ. ಸರ್ಕಾರಿ ಕೆಲಸಗಳಲ್ಲಿ ಕನ್ನಡಿಗರನ್ನು ತರುತ್ತಿದ್ದರು. ಮತ್ತೆ ಪುನಃ ಮೊದಲಿನ ಹಾಗೆ ಸಾಮಾನ್ಯ ಜವಾನನಿಂದ ಹಿಡಿದು ಎಲ್ಲರನ್ನು ಕೇರಳದಿಂದ ತಂದು, ಟ್ರಾನ್ಸ್‌ಫರ್ ಮಾಡಿ ತಂದು ಹಾಕುವಂತಹ ಕೆಲಸ ನಡೆದಿದೆ ಆದರೆ ಓಣಂ ಸಮಯದಲ್ಲಿ ಕುಂಬ್ಳೆ ಪೇಟೆಯಲ್ಲಿ ಮಂಜೇಶ್ವರ ಪೇಟೆಯಲ್ಲಿ, ಕಾಸರಗೋಡು ಪೇಟೆಯಲ್ಲಿ ಮಲೆಯಾಳಿಗಳು ಇರುವುದಿಲ್ಲ, ಓಣಂ ಹೊತ್ತಿಗೆ ಏನಾಗುತ್ತದೆ. ಎಂದರೆ, ಎಲ್ಲರೂ ಅವರವರ ನಾಡಿಗೆ ಹೋಗಿ ಬಿಡುತ್ತಾರೆ ಆಗ ನಾವು ಕನ್ನಡಿಗರು ಮಾತ್ರ ಉಳಿಯುತ್ತೇವೆ. ಅಲ್ಲಿ ಕಾಸರ ಗೋಡಿನಲ್ಲಿ ಮಂಜೇಶ್ವರ ಗೋವಿಂದ ಪೈಗಳ ಪ್ರತಿಮೆಯನ್ನು ಸ್ಥಾಪನೆ ಮಾಡುವುದಕ್ಕೂ ಸಹ ವಿರೋಧ ವ್ಯಕ್ತವಾಗಿದೆ. ಇದು ಕಾಸರಗೋಡಿನಲ್ಲಿ ಕನ್ನಡ ನಾಡಿನಲ್ಲಿ ಆದಂತಹ ಸಂಗತಿ. ಕನ್ನಡಿಗರ ಬೇರೆ ಬೇರೆ ನಿಯೋಗ ಬರುತ್ತದೆ ಯಾರು ಮುಖ್ಯಮಂತ್ರಿಗಳಿರುತ್ತಾರೆ. ಅವರ ಪ್ರೀತಿ ವಿಶ್ವಾಸವನ್ನು ಗಳಿಸುತ್ತಾರೆ. ನಮಗಾಗಿ ಏನಾದರೂ ಮಾಡಿ ಎಂದು ಹೇಳುತ್ತಾರೆ. ಹಿಂದೆ ವಿದ್ಯಾರ್ಥಿಗಳು ಹೋರಾಟ ಮಾಡಿ ಪ್ರಾಣಾರ್ಪಣೆಯನ್ನು ಸಹ ಮಾಡಿದ್ದಾರೆ. ಕಾಸರಗೋಡಿನ ಮೂರು ಲಕ್ಷ ಕನ್ನಡಿಗರು ಯಾರು ಇದ್ದಾರೆ ಅವರಿಗೋಸ್ಕರ ನಾವು ಈ ಪಾಡು ಪಡಬೇಕಾಗಿದೆ. ಮತ್ತು ಆ ಭಾಗವನ್ನು ನಮ್ಮದಾಗಿಸಬೇಕು. ಇನ್ನೊಂದು ಮಾತು ಏನೆಂದರೆ ಹಿಂದೆ ಕಮ್ಯೂನಿಸ್ಟ್ ಮುಖ್ಯಮಂತ್ರಿ ನಂಬೂದಿರಿ ಪಾಡ್ ಇದ್ದಾಗ, ಮಹಾಜನ್ ವರದಿಯನ್ನು ಒಪ್ಪಿದರು. ಈಗ ಅಲ್ಲಿನವರು ನಾವು ಕನ್ನಡದ ಬಗ್ಗೆ ಮಾತನಾಡಿದಾಗ ಮಹಾಜನ್ ವರದಿಯ ಬಗ್ಗೆ ಮಾತನಾಡಿದಾಗ ತಮ್ಮ ಭಾಷಣದಲ್ಲಿ ಹಾಸ್ಯ ಮಾಡುತ್ತಾರೆ. ಎಂಥ ಮಹಾ, ಎಂಥ ಜನ ಎಂದು ತೃಣವಾಗಿ ಹೇಳುತ್ತಾರೆ. ಈ ಪರಿಸ್ಥಿತಿ ಹೋಗಬೇಕು. ಕಾಸರಗೋಡು ಕನ್ನಡನಾಡಿಗೆ ಬರಬೇಕು ನಮ್ಮ ಪ್ರಯತ್ನ ಇದನ್ನು ಉಳಿಸುವುದರ ಜೊತೆಯಲ್ಲಿ ಅದನ್ನು ಗಳಿಸುವಲ್ಲಿ ಇರಬೇಕು ಎಂದು ಸಭಾಧ್ಯಕ್ಷರ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಬಿನ್ನವಿಸುತ್ತೇನೆ.

SRI NARAYANRAO GOVINDRAO TARALE (Belgaum) ; Hon'ble Speaker, Sir, each and every member discussed on the Mahajan Report. Mhajan Repirrt has no base. The Central Government has not directed any principle or guidelines. Mahajan Report is pending before the Parliament. Parliament has to take a decision, we are asking for the justice only, So, my suggestion is those Mahajan Report pending before Parliament. Parliament must take a decision. We have come for wishes of the people and we want to merge in Maharastra. I am opposing this question being discussed here.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈಗ ಮಹಾಜನ ವರದಿ ಆಗಿ ಹೋಗಿದೆ. ಈಗ ಅದರ ಬಗ್ಗೆ ಚರ್ಚೆ, ವಿಚಾರ ಬೇಡ. ತಪ್ಪು ದಾರಿಗೆ ಹೋಗುತ್ತಿದ್ದಾರೆ. ಅದು ಈಗ ಮುಗಿದು ಹೋಗಿದೆ.

+ ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಇವೊತ್ತು ಏನು ಈ ಸದನದ ಎಲ್ಲಾ ಹಿರಿಯ ಸದಸ್ಯರುಗಳು, ಮಾಜಿ ಮಂತ್ರಿಗಳು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ವಾಟಾಳ್ ನಾಗರಾಜ್‌ರವರು ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ಏನು ಠರಾವನ್ನು ಪಾಸ್ ಮಾಡಿದ್ದಾರೆ, ಅದರ ಬಗ್ಗೆ ನಮ್ಮ ಸರ್ಕಾರದ ನಿಲುವು ಮತ್ತು ಈ ಸದನವೂ ಕೂಡ ತನ್ನ ಒಂದು ಠರಾವನ್ನು ಮಾಡಬೇಕೆಂದು ಅಥವಾ ನಿಯೋಗ ಹೋಗಬೇಕೆನ್ನತಕ್ಕಂಥದ್ದನ್ನು ಅವರ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ನಾನು ಈ ವಿಷಯದಲ್ಲಿ ದ್ವಂದ್ವ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದು ಹೇಳಿ ಕೆಲವು ಪತ್ರಿಕೆಗಳು ಕಟುವಾಗಿ ಅಗ್ರ ಲೇಖನಗಳಲ್ಲಿ ಕೂಡ ಬರೆದಿದ್ದನ್ನು ನಾನು ನೋಡಿದ್ದೇನೆ. ನನ್ನ ಪ್ರವಾಸ ಕಾಲದಲ್ಲಿ ಕೆಲವು ಪತ್ರಿಕಾ ಸ್ನೇಹಿತರು, ಈ ವಿಷಯವನ್ನು ನನ್ನ ಮುಂದೆ ಎತ್ತಿದರು. ಮಹಾರಾಷ್ಟ್ರದ ವಿಧಾನ ಸಭೆಯಲ್ಲೂ ಕೂಡ ಅವರು ರೆಸಲೂಷನ್ ಮಾಡುವಾಗ, ಗಡಿ ನಾಡಿನಲ್ಲಿ ಇರತಕ್ಕಂಥ ಮರಾಠಿ ಮಾತನಾಡತಕ್ಕ ಜನಗಳಿಗೆ ಆ ಹಳ್ಳಿಗಳಿಗೆ ಕರ್ನಾಟಕ ಸರ್ಕಾರ ಸರಿಯಾದ ರೀತಿಯಲ್ಲಿ ಅವರಿಗೆ ನಾಗರೀಕ ಸೌಲಭ್ಯ ಒದಗಿಸಲಿಲ್ಲ ಎಂದು ಒಂದು ಮಾತನ್ನು ಹೇಳಿದ್ದಾರೆ.

ಇದರ ಜೊತೆಗೆ ಆಂಧ್ರದ ಕೆಲವು ಗಡಿ ಭಾಗಗಳಲ್ಲಿ ಇರತಕ್ಕಂಥ ಪ್ರದೇಶಗಳಲ್ಲಿ ಏನು ನಕ್ಸಲೈಟ್ಸ್ ಹಾವಳಿ ಇದೆ, ಅಂತಹ ಕಡೆ ನಮ್ಮ ರಾಜ್ಯದ ಕೆಲವು ಪೊಲೀಸ್ ಅಧಿಕಾರಿಗಳು ಹೋಗಿ ನಮ್ಮ ರಾಜ್ಯಕ್ಕೆ ಬಂದು ದಾಳಿಗಳನ್ನು ಅಥವಾ ಆಕೃತಿಗಳನ್ನು ಮಾಡುವಂತಹವರನ್ನು ಅರೆಸ್ಟ್ ಮಾಡಿಕೊಂಡು ಬಂದಿದ್ದಾರೆ. ಅದಕ್ಕೆ ಕೆಲವರು ಹೇಳಿಕೆ ಕೊಟ್ಟಿದ್ದಾರೆ. ನಾವು ಹ್ಯೂಮನ್ ರೈಟ್ಸ್ ಕಮಿಷನ್‌ಗೆ ಅರ್ಜಿ ಹಾಕುತ್ತೇವೆ ಕರ್ನಾಟಕ ಪೋಲಿಸರು ನಮ್ಮ ಮೇಲೆ ಹೆಚ್ಚು ದೌರ್ಜನ್ಯ ಮಾಡುತ್ತಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಇದು ನನ್ನ ಮುಂದೆ ಪತ್ರಿಕೆಯವರು ಕೆಲವರು ಅವರ ಪತ್ರಿಕೆಯಲ್ಲಿ ಬಂದಿರತಕ್ಕಂಥ ವರದಿ ಆಧಾರದ ಮೇಲೆ ಕೇಳಿದರು. ನಾನ ಆ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದೆ. ಇದು ಕೇವಲ ಗಡಿ ಪ್ರಶ್ನೆ ಬಗ್ಗೆ ನಾವು ಮುಖ್ಯಮಂತ್ರಿಗಳ ಸಭೆ ಸೇರಿ ಚರ್ಚೆ ಮಾಡುವುದಲ್ಲ, ನಮಗೆ ನಾನಾ ಸಮಸ್ಯೆಗಳು ಇವೆ. ಇಂಟರ ಸ್ಟೇಟ್ ಟ್ಯಾಕ್ಷೇಶನ್ ಸಮಸ್ಯೆ ಇದೆ, ನಮ್ಮಲ್ಲಿ ಒಂದು ರೀತಿಯ ತೆರಿಗೆ ಇದೆ, ಪಕ್ಕದ ಗಡಿ ರಾಜ್ಯದಲ್ಲಿ ಒಂದು ರೀತಿಯ ತೆರಿಗೆ ಸಮಸ್ಯೆ ಇದೆ. ಇಂಟರ ಸ್ಟೇಟ್ ಟ್ರಾನ್ಸ್‌ಪೋರ್ಟ್ ಬಗ್ಗೆ ಕೂಡ ಸಮಸ್ಯೆಗಳು ಇವೆ. ಹೀಗೆ ನಾನಾ ಸಮಸ್ಯೆಗಳು ಏನು ಇವೆ. ಇಂತಹ ವಿಷಯಗಳ ಮೇಲೆ ಚರ್ಚೆ ಮಾಡುವುದಕ್ಕೆ ಐದು ರಾಜ್ಯಗಳ ಮುಖ್ಯ ಮಂತ್ರಿಗಳು ಸೇರುವುದಕ್ಕೆ ಸೂಕ್ತ. ಹಿಂದೆ ದಕ್ಷಿಣ ರಾಜ್ಯಗಳ ಜೋನಲ್ ಕೌನ್ಸಿಲ್ ಮೀಟಿಂಗ್ ಆಗುತ್ತಿತ್ತು. ಯುನಿಯನ್ ಹೋಮ್ ಮಿನಿಸ್ಟರ್ ಅದನ್ನು ಪ್ರಿಸೈಡ್ ಮಾಡುತ್ತಿದ್ದರು. ಇತ್ತೀಚೆಗೆ ಅದು ನಡಯುತ್ತಿಲ್ಲ, ನಾನು ಪತ್ರ ಬರೆಯುತ್ತೇನೆ. ಈ ಸಮಸ್ಯೆಗಳು ಇದ್ದರೆ ಚರ್ಚೆ ಮಾಡೋಣ. ನಾಗರೀಕ ಸೌಲಭ್ಯವನ್ನು ಒದಗಿಸಿಕೊಡುವುದರಲ್ಲಿ ನಾವು ಯಾವುದೇ ರೀತಿಯ ತಾರತಮ್ಯ ತೋರಿಸಲಿಲ್ಲ ಆದರೆ ಇಂತಹ ಸಮಸ್ಯೆಗಳು ಬಂದಾಗ ಈ ದಕ್ಷಿಣದ ಐದು ರಾಜ್ಯಗಳ ಮುಖ್ಯಮಂತ್ರಿಗಳು ಸಭೆ ಸೇರಿ, ಈ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ನಾನು ಕೇಂದ್ರದ ಗೃಹ ಸಚಿವರುಗಳಿಗೂ ಬರೆಯುತ್ತೇನೆ. ಕಳೆದ ನಾಲ್ಕೈದು ವರ್ಷದಿಂದೀಚೆಗೆ ಈ ತರಹದ ಜೋನಲ್ ಕೌನ್ಸಿಲ್ ಮೀಟಿಂಗ್ ಆಗಲಿಲ್ಲ, ಇದು ಬಂಗಾರಪ್ಪನವರಿಗೂ ಗೊತ್ತಿದೆ, ಶ್ರೀಮಾನ್ ಮೊಯಿಲಿಯವರಿಗೂ ಗೊತ್ತಿದೆ, ಜೋನಲ್ ಕೌನ್ಸಿಲ್ ಮೀಟಿಂಗ್ ಐದು ರಾಜ್ಯಗಳದ್ದು ಹಿಂದೆ ನಡೆಯುತ್ತಿತ್ತು. ರಾಜೀವ ಗಾಂಧಿಯವರ ಕಾಲದಲ್ಲಿ ಆಗಿದೆ, ಶ್ರೀಮತಿ ಇಂದಿರಾ ಗಾಂಧಿಯವರ ಕಾಲದಲ್ಲೂ ಆಗಿದೆ. ನಾಲ್ಕು ವರ್ಷದಿಂದೀಚೆಗೆ ಆಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಎಸ್.ಬಿ. ಚವ್ಹಾಣ್‌ರವರು ಅಧ್ಯಕ್ಷತೆಯಲ್ಲಿ ಜೋನಲ್ ಕೌನ್ಸಿಲ್ ಮೀಟಿಂಗ್ 1992ರಲ್ಲಿ ಆಯಿತು. ಅದಾದ ಮೇಲೆ ಆಗಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಅದಕ್ಕೆ ನಾನು ನಾಲ್ಕು ವರ್ಷಗಳಿಂದ ಎಂದು ಹೇಳಿದ್ದೇನೆ. ನಾನೇಕೆ ಇದನ್ನು ಹೇಳಿದ್ದೇನೆಂದರೆ ನಮ್ಮ ಪೋಲೀಸ್‌ನವರು ಪಾವಗಡದಿಂದ ಹೋಗಿ ಅಲ್ಲಿರತಕ್ಕಂಥ ನಕ್ಸಲೈಟ್ಸ್‌ಗೆ ಅರೆಸ್ಟ್ ಮಾಡಿದ್ದಾರೆ. ಅವರು ಪರಿಶಿಷ್ಟ ಸಮಾಜಕ್ಕೆ ಸೇರಿದವರು ಎಂದು ಡಿ.ಎಸ್.ಎಸ್.ನವರು ಸೇರಿ ಒಂದು ರೆಸಲ್ಯೂಷನ್ ಮಾಡಿದ್ದಾರೆ. ಹ್ಯೂಮನ್ ರೈಟ್ಸ್ ಕಮಿಷನ್‌ಗೆ ತೆಗೆದುಕೊಂಡು ಹೋಗುತ್ತೇವೆ ಎಂದು ಹೇಳಿದ್ದಾರೆ. ಕನ್ನಡ ನಾಡಿನಲ್ಲಿರತಕ್ಕ ಮರಾಠಿಗಳಿಗೆ ನಾಗರೀಕ ಸೌಲಭ್ಯ ಕೊಟ್ಟಿಲ್ಲ. ಇದು ಒಂದು ದೂರು ಇದೆ. ಪತ್ರಿಕೆಯವರು ಕೇಳಿದಾಗ ನಾನು ಹೇಳಿದೆ, ಇಂತಹ ಸಮಸ್ಯೆಗಳು ಬಂದಾಗ ಕುಳಿತು ಚರ್ಚೆ ಮಾಡೋಣ. ಭಾವೋದ್ವೇಗದಿಂದ ಏನಾದರೂ ನಾವು ಅವರಿಗೆ ನಾಗರೀಕ ಸೌಲಭ್ಯ ಕೊಡಲಿಲ್ಲ ಅಥವಾ ಪೋಲೀಸ್‌ನವರು ಹೋಗಿ ಅಕ್ರಮ ಮಾಡಿದ್ದಾರೆ ಎಂದರೆ ತಪ್ಪು. ಹಾಗೆ ಮಾಡಲಿಕ್ಕೆ ಬರುವುದಿಲ್ಲ ಎಂದು ನಾನು ಹೇಳಿದೆ. ನಾವು ಆ ಪೋಲೀಸ್‌ನವರಿಗೆ ತಿಳಿಸಿ, ಆಮೇಲೆ ಹೋಗಿ ಅವರನ್ನು ಅರೆಸ್ಟ್ ಮಾಡಬೇಕಾಗುತ್ತದೆ. It is not so simple...

ನಾವಾಗಿ ಹೋಗಿ ಅರೆಸ್ಟ್ ಮಾಡಲಿಕ್ಕೆ ಬರುವುದಿಲ್ಲ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದೇನೆ. ಒಂದೆರಡು ಪತ್ರಿಕೆಗಳಲ್ಲಿ ಅದನ್ನು ವರದಿ ಮಾಡುವಾಗ ಸ್ವಲ್ಪಮಟ್ಟಿಗೆ ನಾನು ಹೇಳಿದ್ದನ್ನು ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳದೇ ವರದಿ ಮಾಡಿದ ಪರಿಣಾಮ ದೇವೇಗೌಡರು ಇದರಲ್ಲಿ ಏನೋ ತಪ್ಪಿಸಿಗಿದ್ದಾರೆ ಎಂದು ಹೇಳಿ ದೊಡ್ಡ ಅಗ್ರ ಲೇಖನ ಕೂಡ ಬರೆದಿದ್ದಾರೆ. ನಾನು ಅದನ್ನು ನೋಡಿದ್ದೇನೆ. ಈ ಸಂದರ್ಭದಲ್ಲಿ ಇಷ್ಟೇ ಹೇಳಲಿಕ್ಕೆ ಇಷ್ಟ ಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಯಾರು ಏನೋ ಪ್ರಯತ್ನ ಮಾಡಿದರೂ ವಸ್ತು ಸ್ಥಿತಿಯನ್ನು ಬದಲಾವಣೆ ಮಾಡುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ರಾಜಕೀಯ ಪಕ್ಷಗಳು ಇವೊತ್ತು ಬರಬಹುದು ಹೋಗಬಹುದು. ಆದರೆ ವಸ್ತು ಸ್ಥಿತಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಹಾಜನ ವರದಿಯ ಬಗ್ಗೆ ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ಎಷ್ಟು ರೆಸಲ್ಯೂಷನ್‌ಗಳನ್ನು ಮಾಡಿದ್ದಾರೆ, ಎಷ್ಟು ಡೆಲಿಗೇಶನ್‌ಗಳು ಹೋಗಿದ್ದಾರೆ, ಏನೇ ಮಾಡಿದರೂ, ನನ್ನ ಮಿತ್ರರಾದ ಎಂ.ಇ.ಎಸ್‌ನ ಹಿರಿಯ ಸದಸ್ಯರು ಹೇಳಿದರು, ಬೆಳಗಾಂ ಮಹಾರಾಷ್ಟ್ರಕ್ಕೆ ಸೇರಬೇಕು ಎನ್ನುವಂಥದ್ದು ಸ್ವಲ್ಪಮಟ್ಟಿಗಾದರೂ ಕೇಂದ್ರ ಸರ್ಕಾರದ ಮನಸ್ಸಿನಲ್ಲಿದ್ದರೆ, ಪಾರ್ಲಿಮೆಂಟ್ ಮುಂದೆ ಆ ಠರಾವನ್ನು ಮಂಡನೆ ಮಾಡುವುದಕ್ಕೆ ಅವರಿಗೇನು ತೊಂದರೆ ಆಗುತ್ತಿರಲಿಲ್ಲ. ಆದರೆ ಅವರಿಗೆ ಗೊತ್ತಿದೆ ಅದು ಕರ್ನಾಟಕದ ಸ್ವತ್ತು ಎಂದು ಇದನ್ನು ಅರ್ಥ ಮಾಡಿಕೊಂಡೇ ಕೇಂದ್ರ ಸರ್ಕಾರ ಇದುವರೆಗೆ ಯಾವ ರೆಸಲೂಷನ್‌ಗೂ ಮಣಿಯಲಿಲ್ಲ ಎನ್ನುವಂಥದ್ದು ಎಂ.ಇ.ಎಸ್‌ನ ಸ್ನೇಹಿತರುಗಳು ಅರ್ಥ ಮಾಡಿಕೊಳ್ಳಬೇಕು. ಇದು ವಸ್ತು ಸ್ಥಿತಿ.

ಶ್ರೀಮಾನ್ ವೀರಪ್ಪ ಮೊಯಿಲಿಯವರು ಹೇಳಿದ ಹಾಗೆ ಮಾಜಿ ಮುಖ್ಯಮಂತ್ರಿ ಶ್ರೀಮಾನ್ ಶರದ್ ಪವಾರ್‌ರವರು ಖಾನಾಪುರದಲ್ಲಿ ಹೇಳಿದ ವಿಚಾರವನ್ನು ನೀವು ಈಗಲಾದರೂ ಸ್ವಲ್ಪ ಮಟ್ಟಿಗೆ ತಿಳಿದುಕೊಂಡರೆ, ನಿಮ್ಮ ಮನೋಭಾವನೆ ಬದಲಾವಣೆ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಖಾನಾಪುರದಲ್ಲಿ ನನ್ನದು ಹಾಗೂ ಅವರದು ಒಂದು ಜಂಟಿ ಕಾರ್ಯಕ್ರಮ ಒಂದು ಸಕ್ಕರೆ ಕಾರ್ಖಾನೆ ಫೌಂಡೇಶನ್ ಹಾಕತಕ್ಕಂಥ ಸಂದರ್ಭದಲ್ಲಿ ಇತ್ತು. ಆ ಸಂದರ್ಭದಲ್ಲಿ ಅವರು ನೇರವಾಗಿ ಹೇಳಿದ್ದಾರೆ. ನಮ್ಮ ಎಂ.ಇ.ಎಸ್. ಸ್ನೇಹಿತರು ಈಗಲಾದರೂ ಅರ್ಥ ಮಾಡಿಕೊಂಡು, ಹೊಂದಿಕೊಂಡು ಹೋಗುವುದನ್ನು ಕಲಿತುಕೊಳ್ಳಬೇಕು ಎನ್ನತಕ್ಕಂಥ ಮಾತನ್ನು ನೇರವಾಗಿ ಹೇಳಿದ್ದಾರೆ.

ಇಷ್ಟೇ ಅಲ್ಲ, ಇಂದಿನ ಗೃಹ ಮಂತ್ರಿಗಳು ಆದಂತಹ ಶ್ರೀಮಾನ್ ಎಸ್.ಬಿ. ಚವ್ಹಾಣ್‌ರವರು ಕೂಡ ಹೇಳಿದ್ದಾರೆ. ನನ್ನ ಎಂ.ಇ.ಎಸ್. ಸ್ನೇಹಿತರುಗಳು ಇನ್ನು ನೀವು ಇದರ ಬಗ್ಗೆ ಚರ್ಚೆ ಮಾಡತಕ್ಕಂಥದ್ದರಲ್ಲಿ ಅರ್ಥ ಇಲ್ಲ, ನೀವು ನಿಮ್ಮ ಮನೋಭಾವನೆಯನ್ನು ಬದಲಾವಣೆ ಮಾಡಿಕೊಂಡು ಕನ್ನಡಿಗರ ಜೊತೆ ಹೊಂದಿಕೊಂಡು ಹೋಗತಕ್ಕಂಥದ್ದನ್ನು ಕಲಿತುಕೊಳ್ಳಬೇಕು. ಬೆಳಗಾಂ ಕರ್ನಾಟಕದ ಅಂಗ ಎನ್ನುವುದನ್ನು ನೀವು ಮೊದಲು ಭಾವಿಸಿಕೊಳ್ಳಿ. ಇದನ್ನು ಇನ್ನು ಮುಂದುವರೆಸಿಕೊಂಡು ಹೋಗಬೇಡಿ ಎನ್ನುವ ಮಾತನ್ನು ಶ್ರೀ ಎಸ್.ಬಿ. ಚವ್ಹಾಣ್‌ರವರು ಹೇಳಿರುವುದನ್ನು ನಮ್ಮ ಸ್ನೇಹಿತರು ಅರ್ಥ ಮಾಡಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಇದನ್ನು ಮುಂದುವರೆಸಿಕೊಂಡು ಹೋಗದೆ, ಜವಾಬ್ದಾರಿಯಿಂದ ಪರಿಸ್ಥಿತಿಯನ್ನು ನಮ್ಮ ಸ್ನೇಹಿತರುಗಳು ಅರ್ಥ ಮಾಡಿಕೊಳ್ಳಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ಎಲ್ಲಾ ಕಡೆ ಇರತಕ್ಕಂಥ ಹಿರಿಯ, ಕಿರಿಯ ಗೌರವಾನ್ವಿತ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ಹಾಗೆ ಹಮೇಳದೇ ಇದ್ದರೆ, ಅವರಿಗೂ ರಾಜಕೀಯ ಅಸ್ತಿತ್ವ ಉಳಿಯಬೇಕಾಗುತ್ತದೆ, ಹೇಳಲೇಬೇಕಾಗುತ್ತದೆ, ಅವರು ಹೇಳಲಿ, ಪಾಪ ಈ ಸದನಕ್ಕೆ ಬಂದಿದ್ದಾರಲ್ಲ, ಆದುದರಿಂದ ಅದನ್ನು ಹೇಳಿಕೊಂಡೇ ಬರಬೇಕು ಹೊರತಾಗಿ....

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ನೀವು ಯಾರೂ ಅನ್ಯಥಾ ಭಾವನೆ ಮಾಡಿಕೊಳ್ಳಬೇಡಿ. ಅವರಿಗೂ ನಮ್ಮ ಹಾಗೆ ಶಾಸಕರಾಗಿ ಈ ಸದನಕ್ಕೆ ಬರಬೇಕು ಎನ್ನುವ ಆಸೆ ಇದೆ. ಆ ಆಸೆ ಇರುವುದರಿಂದ ಆ ಇಷ್ಯೂವನ್ನು ಹೇಳಿಕೊಂಡೇ ಈ ಸದನಕ್ಕೆ ಬರಬೇಕು ಅವರು.

(ಗೊಂದಲ)

SRI B.I. PATIL : Today itself I will give my resignation .

ಅಧ್ಯಕ್ಷರು : ಮಾನ್ಯ ಬಿ.ಐ ಪಾಟೀಲ್‌ರವರು ನಿಮಗೆ ರಾಜೀನಾಮೆ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಅದಕ್ಕೇ ನಾನು ಹೇಳಿದ್ದುದು ರಾಜೀನಾಮೆ ನನಗೆ ಕೊಡಿ ಎಂದು.

ಶ್ರೀ ಹೆಚ್.ಡಿ. ದೇವೇಗೌಡ : ಬೆಳಗಾಂನ ತಾಲ್ಲೂಕು ಪಂಚಾಯತಿಯವರು ಯಾವ ರೆಸಲ್ಯೂಶನ್‌ನ್ನು ಮಾಡಿದ್ದಾರೋ ಅದನ್ನು ರದ್ದು ಮಾಡಿ, ವಿಭಾಗಾಧಿಕಾರಿಗಳು ನನಗೆ ವರದಿಯನ್ನು ಕಳುಹಿಸಿದ್ದಾರೆ. ಆದರೆ, ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದ್ದುದು ನಮ್ಮ ಈ ಸದನದ ಕಾನೂನು ಚೌಕಟ್ಟಿನಲ್ಲಿ ರಚನೆಯಾದಂಥ ಒಂದು ಸ್ಥಳೀಯ ಸಂಸ್ಥೆ ಆ ರೀತಿ ರೆಸಲ್ಯೂಷನ್ ಮಾಡಿರುವ ಬಗ್ಗೆ ಕ್ರಮ ತೆಗೆದಕೊಳ್ಳಬೇಕಾದುದು, ಒಂದು, ಇನ್ನೊಂದು ಮಾನ್ಯ ಮುಖಂಡರಾದ ಖರ್ಗೆಯವರು ಹೇಳಿದರು, ಯಾವ ಅಧಿಕಾರಿ ಆ ರೀತಿಯ ರೆಸಲ್ಯೂಶನ್‌ನ್ನು ಬರೆದನೋ ಅಂಥವನನ್ನು ಕೂಡ ಅಮಾನತ್ತಿನಲ್ಲಿ ಇಡಬೇಕು ಎನ್ನುವ ಮಾತನ್ನು ಹೇಳಿದರು.

ಶ್ರೀ ವಾಟಾಳ್ ನಾಗರಾಜ್ : ಪಂಚಾಯತಿಯನ್ನು ರದ್ದು ಮಾಡಬೇಕು ಎನ್ನತಕ್ಕಂಥದ್ದು ...

ಶ್ರೀ ಹೆಚ್.ಡಿ. ದೇವೇಗೌಡ : ಅದನ್ನು ಹೇಳಿದರು ಎಂದು ಹೇಳಿದೆ, ನೀವೂ ಕೂಡ ಹೇಳಿದಿರಿ, ನೀವೂ ಹೇಳಿದಿರಿ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ ನೀವು ಆ ತಾಲ್ಲೂಕು ಪಂಚಾಯತಿಯನ್ನು ರದ್ದು ಮಾಡಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ನೀವು ಹೇಳಿದ್ದುದು ಗೊತ್ತಾಯಿತು.

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ ಹಿಂದೆಯೂ ಕೂಡ ಬೆಳಗಾಂ ಕಾರ್ಪೊರೇಶನ್‌ನವರು ರೆಸಲ್ಯೂಶನ್ ಮಾಡಿದ್ದಂಥದ್ದು ನಮಗೆ ನಿಮಗೆ ಎಲ್ಲರಿಗೂ ಗೊತ್ತಿರುವ ವಿಷಯ. ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಬೇಕು ಆ ಬಗ್ಗೆ ಸರ್ಕಾರ ಹಿಂದುಮುಂದು ನೋಡುವುದಿಲ್ಲ ಎನ್ನುವಂಥ ಮಾತನ್ನು ಹೇಳುತ್ತೇನೆ. ನಮ್ಮ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿಯವರು ಕಾಸರಗೋಡು ಬಗ್ಗೆ ಹೇಳಿದರು. ಕಾಸರಗೋಡು ಬಗ್ಗೆ ನನಗೆ ಅನಾಧರಣೆಯವಿದೆ ಎನ್ನತಕ್ಕಂಥದ್ದು. ಸಮಸ್ಯೆಗಳು ಒಂದಕ್ಕೊಂದಕ್ಕೆ ಸೇರಿವೆ. ಏಕೆಂದರೆ ಮಹಾಜನ್ ವರದಿಯೊಳಗೆ ಕೆಲವು ಭಾಗ ಯಾವ ಕಡೆಗೆ ಹೋಗಬೇಕು, ಕೆಲವು ಭಾಗ ಯಾವ ಕಡೆಗೆ ಬರಬೇಕು ಎನ್ನುವಂಥ ಪ್ರಶ್ನೆ ಬೇಕಾದಷ್ಟು ಇದೆ. ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅದನ್ನು ಪ್ರಶ್ನೆ ಮಾಡುವುದಕ್ಕೆ ಹೋದರೆ, ಇನ್ನೂ ಕೆಲವು ವಿಷಯಗಳು ಉದ್ಭವವಾಗುತ್ತವೆ. ಅದಕ್ಕೋಸ್ಕರ ಈ ಸದನದಲ್ಲಿ ಕುಳಿತು ಸದಸ್ಯನಾಗಿ ಚರ್ಚೆ ನಡೆದಂಥ ಕಾಲದಲ್ಲಿ ನಾನು ತಿಳಿದುಕೊಂಡಂಥ ವಿಷಯ. ಯಥಾ ಸ್ಥಿತಿಯನ್ನು ಮುಂದುವರೆಸಿಕೊಂಡು ಹೋಗಬೇಕು ಎನ್ನುವ ಸನ್ನಿವೇಶ ಬಂತು. ಅದೂ ಅಲ್ಲದೇ ಇದ್ದರೆ, ಇನ್ನೂ ಕೆಲವು ಭಾಗ ನಮಗೆ ಬರಬೇಕಾಗುತ್ತದೆ, ಇನ್ನೂ ಕೆಲವು ಭಾಗ ಅವರಿಗೆ ಹೋಗಬೇಕಾಗುತ್ತದೆ. ಅದರ ಬಗ್ಗೆ ಈಗ ಹೆಚ್ಚಾಗಿ ವಿಶ್ಲೇಷಣೆ ಮಾಡುವುದಕ್ಕೆ ಹೋಗದೆ ಸ್ಟೇಟ್‌ಸ್‌ಕೋ ಮೈನ್‌ಟೇನ್ ಮಾಡಬೇಕು ಎನ್ನತಕ್ಕಂಥ ಉದ್ದೇಶ ಬಂದಿದ್ದು ಈ ಸದನದಲ್ಲಿ ಚರ್ಚೆಯ ಫಲಿತಾಂಶ ಹೇಳಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಕಾಸರಗೋಡು ಬಗ್ಗೆ ನಾನು ಹೇಳಿದ್ದುದು.

ಶ್ರೀ ಹೆಚ್.ಡಿ. ದೇವೇಗೌಡ : ಮಹಾಜನ್ ವರದಿಯೊಳಗೆ ನೀವು ಒಂದು ಭಾಗ ಬರಬೇಕು ಎಂದು ಕಾಸರಗೋಡು ಬಗ್ಗೆ ಹೇಳುತ್ತೀರೋ ಇನ್ನೂ ವರದಿ ತೆಗೆದುಕೊಂಡರೆ ಬೇರೆ ಬೇರೆ ರೀತಿಯ ಸಮಸ್ಯೆಗಳು ಬರುತ್ತವೆಂದು ಹೇಳಿ 'ಸ್ಟೇಟಸ್‌ಕೋ' ಮೈನ್‌ಟೇನ್ ಮಾಡಬೇಕು ಎನ್ನುವ ಬಗ್ಗೆ ಇನ್ನು ಚರ್ಚೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. I do not want to enter into the dialogue.

ಆದರೆ ಒಂದು ಮಾತನ್ನು ಹೇಳುತ್ತೇನೆ. ಈ ಸದನದಲ್ಲಿ ಹಿಂದೆ ಏನು ರೆಸಲ್ಯೂಶನ್ ಆಗಿದೆಯೋ ಅದನ್ನು ರೀಟ್ರೇಟ್ ಮಾಡಬೇಕು ಎಂದು ಇದ್ದರೆ ನನ್ನದೂ ಏನೂ ತಕರಾರು ಇಲ್ಲ. ನಮ್ಮ ಸಭಾಧ್ಯಕ್ಷರು ಯಾವ ದಿನ ಗೊತ್ತು ಮಾಡುತ್ತಾರೋ ಮಾಡಲಿ. ರೆಸಲ್ಯೂಶನ್ ಮಾಡುವುದರ ಬಗ್ಗೆ ನನ್ನದು ಏನು ತಕರಾರು ಇಲ್ಲ. ಇದರ ಬಗ್ಗೆ ಸರ್ಕಾರ ಸಿದ್ಧವಿದೆ ಎನ್ನುವಂಥ ಮಾತನ್ನು ಹೇಳಿ ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಬೆಳಗಾಂ ಸೂರ್ಯ ಪೂರ್ವದಲ್ಲಿ ಹುಟ್ಟುವವನು ಪಶ್ಚಿಮದಲ್ಲಿ

ಹುಟ್ಟಿದರೂ ಕೂಡ ಅವರು ಏನು ನಮ್ಮ ಸ್ನೇಹಿತರುಗಳು ತಿಳಿದುಕೊಂಡಿದ್ದಾರೆ ಅದು ಬರೀ ಕಲ್ಪನೆ ಎನ್ನುವುದನ್ನು ತಿಳಿದುಕೊಳ್ಳಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಶಿವಪ್ಪ : ಅಧಿಕಾರಿಗಳು ಕಾನೂನು ವ್ಯಾಪ್ತಿಯಲ್ಲಿ ತೆಗೆದುಕೊಂಡಿದ್ದ ಈ ತೀರ್ಮಾನ ಏನಿದೆ, ಇನ್ನು ಮುಂದೆ ಯಾವುದೇ ಸಂಘ ಸಂಸ್ಥೆಗಳು ಈ ರೀತಿ ತೀರ್ಮಾನವನ್ನು ತೆಗೆದುಕೊಳ್ಳುವುದನ್ನು ಕಾನೂನು ಬಾಹಿರ ಎನ್ನುವ ಬಗ್ಗೆ ಸಂಪೂರ್ಣ ನಿಷೇಧ ಇರುವಂಥ ಕಾನೂನನ್ನು ಸರ್ಕಾರ ಹೊರಡಿಸಬೇಕು. ಅಂಥ ತೀರ್ಮಾನವನ್ನು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಕಾನೂನು ಚೌಕಟ್ಟಿನ್ನು ಮೀರಿ ಯಾವುದೇ ಸಂಘ ಸಂಸ್ಥೆಗಳು ತೀರ್ಮಾನವನ್ನು ತೆಗೆದುಕೊಂಡರೆ ಮರು ಘಳಿಗೆಯೇ ಅವು ತಮ್ಮ ಹಕ್ಕನ್ನು ಕಳೆದುಕೊಳ್ಳುತ್ತೇವೆ ಎನ್ನುವುದಕ್ಕೆ ಕಾನೂನನ್ನು ಸರ್ಕಾರ ಹೊರಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ನಮ್ಮ ಪಂಚಾಯತ್ ರಾಜ್ ಕಾನೂನು ಪ್ರಕಾರ ಇಂಥ ಒಂದು ನಿರ್ಣಯ ಮಾಡಲಿಕ್ಕೆ ಸಾಧ್ಯವೇ ಇಲ್ಲವೆಂದು ನನ್ನ ಅಭಿಪ್ರಾಯ. ಏಕೆಂದರೆ ಅವರು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಬೇಕು, ಅವರಿಗೆ ಕೊಟ್ಟಿರತಕ್ಕಂಥ ಅಧಿಕಾರ ಏನಿದೆ, ಕಾನೂನು ವ್ಯಾಪ್ತಿ ಏನಿದೆ, ಇದು ಹೊರಗಡೆ ಇರತಕ್ಕಂಥ ಯಾವ ವಿಷಯದ ಬಗ್ಗೆ ತೀರ್ಮಾನವಾಗಲೀ ಅಥವಾ ಕಾರ್ಯಕ್ರಮವಾಗಲೀ ಹಾಕಿಕೊಳ್ಳಲು ಅಧಿಕಾರ ಇಲ್ಲ. ಅದಕ್ಕೋಸ್ಕರ ತಾವು ಅರ್ಥ ಮಾಡಿಕೊಳ್ಳಬೇಕು. ಈ ಸಂಘಸಂಸ್ಥೆಗಳು ಸಾರ್ವಭೌಮ ಸಂಸ್ಥೆಗಳಲ್ಲ. ಈ ಸರ್ಕಾರ ಪದೇ ಪದೇ 'ಸೊವರೀನ್ ರಿಪಬ್ಲಿಕ್' ಎಂದು ಹೇಳಿದ್ದಕ್ಕೆ ಈ ಮಾತನ್ನು ಹೇಳಿದೆ. They are not Sovereign republies ನಮ್ಮ ಪಂಚಾಯತ್ ರಾಜ್ ಕಾನೂನಿನ ಅಡಿಯಲ್ಲಿ ಕೆಲಸ ಮಾಡಬೇಕು. ಇದರ ಬಾಹಿರವಾಗಿ ಏನಾದರೂ ನಿರ್ಣಯ ಮಾಡಿದರೆ ತಕ್ಷಣ ಅದನ್ನು ರದ್ದು ಮಾಡುವಂಥ ಅಧಿಕಾರ ನಮ್ಮ ಅಧಿಕಾರ ಸ್ಥಿರಿಸಿ ಇದೆ. ಇದು ಅವರು ಮಾಡುವಂಥ ಕೆಲಸ. ಒಂದು ವೇಳೆ ಅವರಿಗೆ ಭಯ ಅದರೆ, ತಕ್ಷಣ ರಾಜ್ಯ ಸರ್ಕಾರಕ್ಕೆ ತಿಳಿಸತಕ್ಕದ್ದು. ಮತ್ತೆ ಯಾವುದು ಕಾನೂನಿನ ವ್ಯಾಪ್ತಿಯಲ್ಲಿ ಹೊರಗಡೆ ಇದೆ ಅದನ್ನು ಆಟೋಮ್ಯಾಟಿಕ್ ಆಗಿ ರದ್ದು ಮಾಡತಕ್ಕದ್ದು. ಇದರಿಂದ ಪಂಚಾಯತ್ ರಾಜ್ ಸಂಸ್ಥೆ ಅಧಿಕಾರಕ್ಕೆ ಯಾವೊಂದು ಧಕ್ಕೆ ಬರುವುದಿಲ್ಲ. ಅಂದರೆ ಅದರ ವ್ಯಾಪ್ತಿಯಲ್ಲಿ ಅವರು ಕೆಲಸ ಮಾಡಬೇಕು. ಆದರೆ ಅವರು 'ಸೊವರೀನ್ ರಿಪಬ್ಲಿಕ್' ಅಲ್ಲ. ಪದೇ ಪದೇ ದಯವಿಟ್ಟು ನೀವು ಮಂತ್ರಿಗಳು 'ಸೊವರೀನ್ ರಿಪಬ್ಲಿಕ್' ಎಂದು ಏನು ಮಾಡಿದ್ದೀರಿ ಅದನ್ನು ದಯವಿಟ್ಟು ಮಾಡುವುದನ್ನು ಬಿಟ್ಟುಬಿಡಿ. ಅದಕ್ಕೋಸ್ಕರ ನಾನು ಹೇಳಿದ್ದುದು they are not sovereign republics. They are the units which have to function within the parameters of the Panchayat Raj Act of 1993.

1.40 ಪಿ.ಎಂ

ಅದರ ಪ್ರಕಾರ, ಪಾಪ ಅಧಿಕಾರಸ್ಥರು ಸ್ವಲ್ಪ ಹೇಳಿಬಿಡಿ. ಇದೊಂದೇ ವಿಷಯವಲ್ಲ. ಗಡಿ ಪ್ರಶ್ನೆ ಒಂದೆ ಅಲ್ಲ, ಯಾವುದೇ ಪ್ರಶ್ನೆ ಕಾನೂನಿನ ವ್ಯಾಪ್ತಿಯೊಳಗೆ ಹೊರಗಡೆ ಏನಾದರೂ ಮಾಡುವುದಕ್ಕೆ ಜನತಾ ಪ್ರತಿನಿಧಿಗಳು ಪ್ರಯತ್ನ ಮಾಡಿದಾಗ, ಆಗ ಅಧಿಕಾರಸ್ಥರ ಕರ್ತವ್ಯ ಏನು ಎಂದರೆ, ಪಂಚಾಯತ್ ರಾಜ್ ಕಾನೂನಿನ ಪ್ರಕಾರ ಇದನ್ನು ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳಬೇಕು. ಏಕೆಂದರೆ 'ಸೊವರೀನ್ ಅಥಾರಿಟಿ' ಅದು panchayat raj institutions have been set up under sovereign authority of Karnataka Legislature ನಾವು ಸೆಟ್ ಅಪ್ ಮಾಡಿದ್ದೇವೆ. ಕಾನೂನು

ಪ್ರಕಾರ ಏನು ಅಧಿಕಾರವನ್ನು ಕೊಟ್ಟಿದ್ದೇವೆ, ಅದರ ಪ್ರಕಾರ ಅವರು ಕೆಲಸ ಮಾಡತಕ್ಕದ್ದು. ಈ ಒಂದು ಪ್ರಶ್ನೆ ಏನಿದೆ, ಈ ವಿಷಯವಾಗಿ ಸ್ಪಷ್ಟಪಡಿಸಲಿಕ್ಕೆ ಅವಕಾಶ ಇದೆ. ಆ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಈಗ ವಿರೋಧ ಪಕ್ಷದ ನಾಯಕರು, ನಾವು ಊಟ ಮಾಡಿಕೊಂಡು ಬಂದು ಚರ್ಚೆಯನ್ನು ಮುಂದುವರೆಸಬೇಕು ಎಂದಿದ್ದಾರೆ...

Sri H. Shivappa : Under section 348 of the Panchayat Raj Act they can be dissolved.

ಅಧ್ಯಕ್ಷರು : ಈಗ ನಾವು ಊಟ ಮಾಡಿಕೊಂಡು ಬಂದು ಮತ್ತೆ ಚರ್ಚೆಯನ್ನು ಮುಂದುವರಿಸಬೇಕು. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಯಥಾಸ್ಥಿತಿ ಎಂದು ಹೇಳತಕ್ಕ ಪ್ರಶ್ನೆ ಬರುವುದಿಲ್ಲ. ಮಹಾಜನ್ ವರದಿ ಸಂಪೂರ್ಣವಾಗಿ ಕಾರ್ಯಗತವಾಗಬೇಕು. ಅದರಲ್ಲಿ ಕಾಸರಗೋಡು ಸೇರುತ್ತದೆ. ಅದರಲ್ಲಿ ಬೇರೆ ಮಾತೇ ಇಲ್ಲ. ಯಥಾಸ್ಥಿತಿ ಎನ್ನತಕ್ಕ ಪ್ರಶ್ನೆ ಇಲ್ಲ.

ಇನ್ನು ಎರಡನೆಯದು ಎಂದರೆ, ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ, ಆ ತಾಲ್ಲೂಕು ಪಂಚಾಯಿತಿಗಳನ್ನು ಈ ಕೂಡಲೇ ರದ್ದು ಮಾಡುತ್ತೇವೆಂದು ಈ ಸದನದಲ್ಲಿ ಹೇಳಬೇಕು. ನಾವು ಇದಕ್ಕೆ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆಂದು ಸರ್ಕಾರ ಹೇಳುವುದಕ್ಕಾಗುವುದಿಲ್ಲ. ಆ ತಾಲ್ಲೂಕು ಪಂಚಾಯಿತಿಗಳನ್ನು ರದ್ದುಗೊಳಿಸಬೇಕು. ಇದನ್ನು ಹೇಳುವವರೆಗೂ ನಾನು ಧರಣಿ ಕುಳಿತುಕೊಳ್ಳುತ್ತೇನೆ.

(ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾಧ್ಯಕ್ಷರ ಮುಂದಿನ ಆವರಣದಲ್ಲಿ ಧರಣಿ ಕುಳಿತರು)

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರು ಇದು ಸರಿಯಲ್ಲ. ದಯವಿಟ್ಟು ತಮ್ಮ ಜಾಗಕ್ಕೆ ಹೋಗಿ ಕುಳಿತುಕೊಳ್ಳಿ. ಈಗ ನಾವು ಊಟ ಮಾಡಿಕೊಂಡು ಬಂದು ಮತ್ತೆ ಕುಳಿತುಕೊಳ್ಳೋಣ.

ಶ್ರೀ ಹೆಚ್.ಡಿ. ದೇವೇಗೌಡ : ಆ ರೆಸಲ್ಯೂಷನ್‌ನ್ನು ಡಿವಿಜನಲ್ ಕಮೀಷನ್‌ರವರು ರದ್ದು ಮಾಡಿದ್ದಾರೆ. ಈ ವಿಚಾರದಲ್ಲಿ ಈಗಾಗಲೇ ಮಾನ್ಯ ಘೋರ್ಪಡೆಯವರು, ಮಾನ್ಯ ಕಾಗೋಡು ತಿಮ್ಮಪ್ಪನವರು, ಮಾನ್ಯ ಖರ್ಗೆಯವರು, ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ. ಆದ್ದರಿಂದ ಇದರ ಬಗ್ಗೆ ನಾನು ಇಷ್ಟು ಮಾತ್ರ ಹೇಳುತ್ತೇನೆ, ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಕೆಲವು ಪ್ರೊಸೀಜರ್ಸ್ ಇದೆ. ಅದನ್ನನುಸರಿಸಿ ಇದರ ಬಗ್ಗೆ ಸರ್ಕಾರ ತೀವ್ರ ಕ್ರಮವನ್ನು ತೆಗೆದುಕೊಳ್ಳುತ್ತದೆ. ಇದರ ಬಗ್ಗೆ ತಾವು ದಯವಿಟ್ಟು ಸಹಕರಿಸಬೇಕು.

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ ಈಗಲಾದರೂ ತಾವು ಧರಣಿ ಬಿಟ್ಟು ಏಳಬಹುದಲ್ಲಾ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿಯಿಂದ ಎದ್ದು ತಮ್ಮ ಸ್ಥಾನಕ್ಕೆ ಹೋದರು)

ಅಧ್ಯಕ್ಷರು : ಈಗ ಸಭೆಯನ್ನು ಇಲ್ಲಿಗೆ ಮುಕ್ತಾಯ ಮಾಡಿ ಮಧ್ಯಾಹ್ನ 3 ಗಂಟೆವರೆಗೂ ಮುಂದೂಡಿದ್ದೇನೆ.

(ಸದನವು ಮಧ್ಯಾಹ್ನ 1.53ಕ್ಕೆ ಮುಕ್ತಾಯವಾಗಿ ಮತ್ತೆ 3 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)

(3-17 ಗಂಟೆಗೆ ಸಭೆ ಪುನಃ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷರಾದ ಶ್ರೀ ಎಂ.ಎಸ್. ಪಾಟೀಲ್ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಉಪಾಧ್ಯಕ್ಷರು : ವಿರೋಧ ಪಕ್ಷದ ನಾಯಕರು ತಮ್ಮ ಭಾಷಣವನ್ನು ಮುಂದುವರೆಸಬಹುದು.

ಅವಿಶ್ವಾಸ ನಿರ್ಣಯದ ಬಗ್ಗೆ ಮುಂದುವರಿದ ಚರ್ಚೆ

+ ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಉಪಾಧ್ಯಕ್ಷರೇ, ನಿನ್ನೆಯ ದಿವಸ ಈ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯದ ಬಗ್ಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡಿ 20-25 ನಿಮಿಷ ಮಾತನಾಡಿದ ಮೇಲೆ ಮುಂದೆ ಮಾತನಾಡುವುದಕ್ಕೆ ಆಗಲಿಲ್ಲ. ಈಗ ನಾನು ಅವಿಶ್ವಾಸ ನಿರ್ಣಯದ ಬಗ್ಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡುತ್ತಿದ್ದೇನೆ. ನಿನ್ನೆಯ ದಿವಸ ಈ ಕಡೆಯಲ್ಲಿ ಇರುವಂಥ ಹಿರಿಯ ಮಾಜಿ ಮುಖ್ಯಮಂತ್ರಿಗಳು, ಹಿರಿಯ ಸದಸ್ಯರಾದ ಶ್ರೀ ಬಂಗಾರಪ್ಪನವರು, ಮೊಯಿಲಿಯವರು, ನಾಗೇಗೌಡರು, ನಾಣಯ್ಯನವರು 'ಕಾನೂನು ಓದಿಬನ್ನಿ, ನಿಯಮಾವಳಿಗಳನ್ನು ತಿಳಿದುಕೊಂಡು ಬನ್ನಿ ಎಂದು ಸಲಹೆಯನ್ನು ಕೊಟ್ಟಿದ್ದಾರೆ. ನಮ್ಮ ಹಿರಿಯ ಸದಸ್ಯರಾದ ಶ್ರೀ ನಂಜೇಗೌಡರು ಇನ್ನೂ ಚೆನ್ನಾಗಿ ನಾನು ಬಿಸಿ ಮುಟ್ಟುವ ರೀತಿಯಲ್ಲಿ ಹೇಳುತ್ತಿದ್ದೆ? ನೀವು ನೇರವಾಗಿ ಹೇಳಿದಿರಿ ಎಂದು ಹೇಳಿದರು. ನಾನು ಅವರೆಲ್ಲರಿಗೂ ಕೂಡ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನನ್ನಲ್ಲಿ ಏನು ಕೊರತೆ ಇದೆ, ಕಾನೂನು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ನಿಶ್ಚಯ ಮಾಡಿದ್ದೇನೆ. ಅಧ್ಯಕ್ಷರೇ, ನಾನು ತುಂಬ ಹಳ್ಳಿಯಿಂದ ಬಂದವನು. ನಾನು ನನ್ನ ಅಪ್ಪನಿಗೆ ಹೇಳುತ್ತಿದ್ದೆ ಹೆಚ್ಚು ಓದಿಸಿ ಅಂತ. ಆದರೆ ಅವರು ಹೆಚ್ಚು ಓದಿಸಲಿಲ್ಲ. ಅವರು ಹೇಳುತ್ತಿದ್ದರು 'ನೀನು ಹೆಚ್ಚು ಓದಿಕೋಬೇಡ, ಹೆಚ್ಚು ತಿಳಿದುಕೊಳ್ಳುವುದಕ್ಕೆ ಹೋಗಬೇಡ. ಈ ಕಾನೂನು ಬಹುತೇಕವಾಗಿ ಉಪಯೋಗವಾಗುವಂಥಾದ್ದು ಭ್ರಷ್ಟರನ್ನು, ಕೊಲೆಗಡುಕರನ್ನು ರಕ್ಷಣೆ ಮಾಡುವುದಕ್ಕೆ ಹೊರತಾಗಿ ಜನರ ಹಿತ ರಕ್ಷಣೆಗೋಸ್ಕರ ಅಲ್ಲ ಇದು. ಉದ್ದೇಶ ಒಳ್ಳೆಯದು ಇದ್ದರೂ ಸಹ ಅದರ ದಿಕ್ಕು ಬೇರೆಯಾಗಿದೆ. ಅದಕ್ಕಾಗಿ ನಿನಗೆ ಏನೂ ಗೊತ್ತಿಲ್ಲದಿದ್ದರೆ ಕಾನೂನನ್ನು ತಿಳಿದುಕೊಂಡಿರುವಂಥ ಜನ ಬಹಳ ಮಂದಿ ಇದ್ದಾರೆ. ಓದಿದವರು ಬಹಳ ಜನ ಇದ್ದಾರೆ. ಅವರನ್ನು ಕೇಳಿ ತಿಳಿದುಕೊಳ್ಳಬಹುದು. ಎಲ್ಲವನ್ನೂ ನಂಬಬೇಡ. ಸರಿಯೆಂದು ತಿಳಿದುಕೊಂಡು ಮುಂದೆ ಹೋಗು, ಇಲ್ಲದಿದ್ದರೆ ನಿನ್ನನ್ನು ಸಿಕ್ಕಿಸಿಬಿಡುತ್ತಾರೆ. ಎಂದು ಅವರು ಹೇಳಿದ್ದರು. ಮಾನ್ಯ ಉಪಾಧ್ಯಕ್ಷರೇ, ನಿನ್ನೆ ದಿವಸ ನನಗೆ ಎಚ್ಚರ ಬಂದಿದೆ.

ಸನ್ಮಾನ್ಯ ಅಧ್ಯಕ್ಷರೇ, ನನಗೆ ದುಃಖ ಆಗುವಂತಾದ್ದು, ಇಷ್ಟೆಲ್ಲಾ 8 ತಿಂಗಳಿಂದ ಹಗಲು ದರೋಡೆಯಾಗುತ್ತಿದೆ ಎಂದು ಜನರು ಮಾತನಾಡುತ್ತಿದ್ದಾರೆ, ಲೂಟಿಯಾಗುತ್ತಿದೆ ಎಂದು ಮಾತನಾಡುತ್ತಾ ಇದ್ದಾರೆ, ಸರ್ಕಾರದ ಖಜಾನೆ ಖಾಲಿಯಾಗುತ್ತಿದೆ ಎಂದು ಮಾತನಾಡುತ್ತಾ ಇದ್ದರೆ, ಒಬ್ಬ ಅಧಿಕಾರಿ ಹೊರಗಡೆ ಬಂದು ಇದೆಲ್ಲಾ ಆಗುತ್ತಾ ಇದೆ, ಸಹಿಸಿಕೊಳ್ಳುವುದಕ್ಕೆ ಆಗುತ್ತಾ ಇಲ್ಲ ಎಂದು ಹೇಳಲಿಲ್ಲ. ಇನ್ನೊಬ್ಬ ಮಹಾರಾಷ್ಟ್ರದ ಖೈನಾರ್ ಆಗುವುದಕ್ಕೆ ಯಾರೂ ಪ್ರಯತ್ನ ಮಾಡಲಿಲ್ಲ. ಬಹಳ ಪ್ರಾಮಾಣಿಕ